(6) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ

ವಿಷಯ: (ಅ) ನಾರಾಯಣಪುರ ತೋಟಗಾರಿಕೆ ಕ್ಷೇತ್ರದಲ್ಲಿ ಸಾರ್ವಜನಿಕ ಹಣ ಲೂಟಿ.

\+ ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಉಪಾಧ್ಯಕ್ಷರೆ, ನಾವು ಇವತ್ತು ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ನಾರಾಯಣಪುರ ತೋಟಗಾರಿಕೆ ಕ್ಷೇತ್ರದಲ್ಲಿ 5 ಕೋಟಿ ರೂಪಾಯಿಗಳ ಸಾರ್ವಜನಿಕರ ಹಣ ಲೂಟಿಯಾಗಿದೆ ಎಂದು ಪ್ರಸ್ತಾಪ ಮಾಡಿದಾಗ ಆ ವಿಷಯದ ಘನತೆ ಮತ್ತು ಗಾಂಭೀರ್ಯತೆ ತಾವು ಗಮನಿಸಿ ಈಗ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಪ್ರಥಮವಾಗಿ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತಿದ್ದೇನೆ. 5 ಕೋಟಿ ರೂಪಾಯಿಗಳ ಸಾರ್ವಜನಿಕರ ಹಣ ಲೂಟಿಯಾಗಿದೆ, ಮತ್ತು ದುರುಪಯೋಗವಾಗಿದೆ. ಸರ್ಕಾರಕ್ಕೆ ಗೊತ್ತಿತ್ತು ಇದನ್ನು ನನ್ನ ಮುಂದಿನ ಮಾತಿನಲ್ಲಿ ಹೇಳುತ್ತೇನೆ. ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಕಣ್ಣುಮುಚ್ಚಿಕೊಂಡು ಅದಕ್ಕೆ ಪ್ರೋತ್ಸಾಹ ಕೊಟ್ಟಿದೆ. ಇಂತಹ ಒಂದು ನಡವಳಿಕೆ ಕರ್ನಾಟಕ ಆಡಳಿತಾತ್ಮಕ ಇತಿಹಾಸದಲ್ಲಿ ಎಂದೂ ನಡೆದಿಲ್ಲವೆಂದು ಮಾನ್ಯ ಮಂತ್ರಿಗಳು ಗಮನಿಸಬೇಕು. ಅವರು ಪೊಲೀಸ್ ಇಲಾಖೆಯಿಂದ ಬಂದವರು. ಆ ಪೊಲೀಸ್ ಇಲಾಖೆಯ ಅಂದಿನ ಶಿಸ್ತನ್ನು ಇವತ್ತು ಈ ಇಲಾಖೆಯಲ್ಲಿ ತರುತ್ತಾರೆ ಎನ್ನತಕ್ಕಂಥ ಒಂದು ಆಶಾಭಾವನೆ ಇತ್ತು. ಆ ಆಶಾಭಾವನೆ ನುಚ್ಚುನೂರಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ, ತಾವು ದಯಮಾಡಿ ಸ್ವಲ್ಪ ಕಡಿವಾಣ ಹಾಕಬೇಕು, ಸವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ನಾರಾಯಣಪುರ ತೋಟಗಾರಿಕೆ ಕ್ಷೇತ್ರ ಗುಲ್ಬರ್ಗಾ ಜಿಲ್ಲೆಯಲ್ಲಿ ಇದೆ. ಅದರ ವಿಸ್ತೀರ್ಣ 80 ಎಕರೆ ಇದೆ. 60 ಎಕರೆಯಲ್ಲಿ ತೋಟದ ಬೆಳೆಗಳಾದ ಮಾವು ಮತ್ತು ಸಪೋಟಾ ಬೆಳೆಯುತ್ತಿದ್ದಾರೆ. ಇನ್ನು 20 ಎಕರೆ ಖಾಲಿ ಬಿದ್ದಿದೆ. ಅದನ್ನೂ ಕೂಡ ಅಕ್ಕಪಕ್ಕ ಪ್ರಭಾವಶಾಲಿ ಜನರು ಒತ್ತುವರಿ ಮಾಡಿಕೊಂಡಿರಬಹುದು. ಆ ತೋಟಗಾರಿಕೆ ಕ್ಷೇತ್ರದಲ್ಲಿ ಒಬ್ಬರು ತೋಟಗಾರಿಕೆ ಸಹಾಯಕರೆಂದು ಇದ್ದಾರೆ, ಅವರನ್ನು ಏನು ಮಾಡುತ್ತಾರೆ. ಅವರನ್ನು ಪ್ರಭಾರ ತೋಟಗಾರಿಕೆ ಸಹಾಯಕ ಅಧಿಕಾರಿಯನ್ನಾಗಿ ನೇಮಕ ಮಾಡುತ್ತಾರೆ. ಅವರು ನೇಮಕವಾದ ಮೇಲೆ ಅಲ್ಲಿ ಒಬ್ಬರು ಸಹಾಯಕ ತೋಟಗಾರಿಕೆ ನಿರ್ದೇಶಕರೆಂದು ಇರುತ್ತಾರೆ. ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಿ, ಈ ಪ್ರಭಾರಿ ಸಹಾಯಕ ತೋಟಗಾರಿಕೆ ಇಲಾಖೆಯ ಅಧಿಕಾರಿಗಳೆಂದು ಏನು ಇರುತ್ತಾರೆ ಅವರನ್ನು ಇನ್‌ಚಾರ್ಜ್ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರನ್ನಾಗಿ ಮಾಡುತ್ತಾರೆ. ಇದು ಎಲ್ಲಿಯಾದರೂ ಕೂಡ ಕರ್ನಾಟಕ ಆಡಳಿತಾತ್ಮಕ ಒಂದು ವ್ಯವಸ್ಥೆಯೊಳಗೆ ಅಥವಾ ಇತಿಹಾಸದಲ್ಲಿ ತೋಟಗಾರಿಕೆ ಇಲಾಖೆಯ ಸಹಾಯಕರನ್ನು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರೆಂದು ಮಾಡಿದ್ದು ಇದೆಯೇ? ಅವನನ್ನು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರೆಂದು ಮಾಡಿದ ಮೇಲೆ ಅವನಿಗೆ ಡ್ರಾಯಿಂಗ್ ಪವರ್ಸ್‌ಗಳು ಬರುತ್ತವೆ. ಇದು ಮುಖ್ಯ. ಅವನಿಗೆ ಡ್ರಾಯಿಂಗ್ ಪವರ್ಸ್

ಅನ್ನು ಕೊಡಿಸಬೇಕೆನ್ನುವ ದುರುದ್ದೇಶದಿಂದಲೇ ಅವನಿಗೆ ಪ್ರಭಾರ ಸಹಾಯಕ ತೋಟಗಾರಿಕೆ ಇಲಾಖೆಯ ನಿರ್ದೇಶಕರೆಂದು ಮಾಡುತ್ತಾರೆ. ಆ ಆದೇಶ ಎಲ್ಲಿಂದ ಹೋಗುತ್ತದೆ. ಯಾರು ಅಲ್ಲಿ ಮೇಲಾಧಿಕಾರಿಗಳೆಂದು ಇರುತ್ತಾರೆ. ಅವರು ಅದನ್ನು ಹೇಳಬೇಕು. ನಿಮ್ಮ ಡೈರೆಕ್ಟರ ಆಫೀಸ್‌ದಿಂದ ಇಂತಹವರಿಗೆ ಇನ್‌ಚಾರ್ಜ ಮಾಡಿ ಎಂದು ಹೋಗುತ್ತದೆ. ನಾನು ಪೀಠಿಕೆಯಲ್ಲಿಯೇ ಹೇಳಿದ್ದೇನೆ, ಈ ವಿಷಯ ಸರ್ಕಾರಕ್ಕೆ ಗೊತ್ತಿದೆ. ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಕಣ್ಣುಮುಚ್ಚಿಕೊಂಡಿದೆ. ಪರೋಕ್ಷವಾಗಿ ಅಲ್ಲ, ಪ್ರತ್ಯಕ್ಷವಾಗಿ ಈ ಹಣ ಲೂಟಿಯಾಗಿದೆ, ತಾವು ಸರ್ಕಾರದವರೂ ಕೂಡ ಕಾರಣತಕರ್ತರಾಗಿದ್ದೀರೆಂದು ಹೇಳುತ್ತೇನೆ. ಅದಕ್ಕಾಗಿ ನಾನು ಮೊದಲು ಹೇಳಿದ್ದೇನೆ. ನಿರ್ದೇಶಕರ ಕಛೇರಿಯಿಂದ ಪತ್ರ ಹೋಗುತ್ತದೆ. ಅವನನ್ನೊ ಇನ್‌ಚಾರ್ಜ್ ಮಾಡಿ ಎಂದು. ನಾವು ಮಾಡಿಕೊಂಡಿರತಕ್ಕಂಥ ಕೆ.ಸಿ.ಎಸ್.ಆರ್.ರೂಲ್ಸ್ ಏನ ಇದೆ, ಕೆ.ಸಿ.ಎಸ್.ಆರ್.ರೂಲ್ಸ್ 32 ಅದರ ಕಾಂಟ್ರವೆನ್‌ಷನ್ ಆಗುತ್ತದೆ ಇದು. ಅದನ್ನು ಅಕೌಂಟೆಂಟ್ ಜನರಲ್‌ರವರು ಮೆನ್‌ಷನ್ ಮಾಡುತ್ತಾರೆ. ಅದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. "The official incharge of the post of Assistant Director of Farm Mr. So and So, who is now under suspension on charges of this fraudulent withdrawal was holding the Post from 2-1-1992 to 23-6-1997 as Incharge Assistant Director of Hortiecultual Farm, Narayanpur as per G.O. NO.GA 21/SAS/ 7 dated 3-8-1997. Prior approval of the Finance Department has to be obtained whenever Independent Charge arrangements are to be continued for more than a year. However, no such approval is forthcoming. Further, the Official is holding the regular post of Assistant Horticultural officer on Incharge basis under Rule 32 of the KCS Rs and Note-I to Rule 32 states that a Government servant can be appointed under this Rule only if he is eligible to be promoted to that post according to the C an R Rules applicable to that post or if he is holding that post in an equivalent or higher post. It is not known as to how the said official who was already in an Incharge Post under Rule 32 as A.H.O., was given another charge which is not in the same line of promotion and was continued to hold the Gazetted post nearly more than three years." en-

joying full drawing powers." ಒಬ್ಬ ತೋಟಗಾರಿಕೆ ಇಲಾಖೆಯ ಸಹಾಯಕ ಅಧಿಕಾರಿ, ನಂತರ ಇನ್‌ಚಾರ್ಜ್ ಸಹಾಯಕ ತೋಟಗಾರಿಕೆ ಇಲಾಖೆಯ ನಿರ್ದೇಶಕನಾಗುತ್ತಾನೆ. ಇದು ನಾವೇ ಮಾಡಿಕೊಂಡಿರತಕ್ಕ ಕೆ.ಸಿ.ಎಸ್.ಆರ್.ರೂಲ್ಸ್ ವಿರುದ್ಧ ಇರುತ್ತದೆ. ಇದು ವರದಿಯಲ್ಲಿ ಬಂದಿದೆ. ಇದು ಸರ್ಕಾರಕ್ಕೆ ಗೊತ್ತಿದೆ. ಈಗ ಡೈರೆಕ್ಟರ್ ಕಛೇರಿಯಿಂದ ಸಹಾಯಕ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರೆಂದು ಮಾಡಲು ತಿಳಿಸುತ್ತಾರೆ. ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಂಡಿದೆಯೇ? ಇದು ಸರ್ಕಾರಕ್ಕೆ ಗೊತ್ತಿರಲಿಲ್ಲವೇ? ಏನು ಮಾಡುತ್ತಿದ್ದೀರಿ ಹೇಳಿ. ಆಮೇಲೆ ಅವರು ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳುತ್ತಾರೆ. ಅವರು ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆಂದು ನಾನು ಮುಂದೆ ಹೇಳುತ್ತೇನೆ. ನಿರ್ದೇಶಕರ ಕಛೇರಿಯಿಂದ ಲೆಕ್ಕಪರಿಶೋಧಕರ ತಂಡವು ನಾರಾಯಣಪುರಕ್ಕೆ 1994 ಜುಲೈನಲ್ಲಿ, 1995 ಸೆಪ್ಟೆಂಬರ್‌ನಲ್ಲಿ, 1996 ಜುಲೈನಲ್ಲಿ ಹೀಗೆ ಮೂರು ಸಾರಿ ಹೋಗಿ ಬಂದಾದ ಮೇಲೆ ಅವರು ಆಡಿಟ್ ರಿಪೋರ್ಟ್‌ನ್ನು ಸಬ್‌ಮಿಟ್ ಮಾಡುವುದಿಲ್ಲ. ಆಡಿಟ್ ವರದಿಯನ್ನು ಅವರು ಹಾಗೆಯೇ ಇಟ್ಟುಕೊಳ್ಳುತ್ತಾರೆ. ಒಂದು ಸಾರಿ ಆಡಿಟ್ ಪಾರ್ಟಿಯವರು ಹೋಗಿ ಆಡಿಟ್‌ನ್ನು ಮಾಡಿಕೊಂಡು ಬಂದ ಮೇಲೆ ಅವರು 15 ದಿವಸದೊಳಗೆ ಆಡಿಟ್ ವರದಿಯನ್ನು ಸಲ್ಲಿಸಬೇಕೆಂದು ಸರ್ಕಾರಿ ನಿಯಮವಿದೆ. ನಿಮ್ಮ ನಿರ್ದೇಶಕರ ಕಛೇರಿಯ ಆಡಿಟ್ ಪಾರ್ಟಿಯವರು ಮೂರು ಸಾರಿ ಹೋಗಿ ಆಡಿಟ್ ಮಾಡಿ ಬಂದರೂ ಸಹಿತ ಆಡಿಟ್ ವರದಿಯನ್ನು ಅವರು ಸಬ್‌ಮಿಟ್ ಮಾಡುವುದಿಲ್ಲ. ಅಮೇಲೆ ಎ.ಜಿ.ಆಫೀಸ್‌ನವರು ಈ ಒಂದು ಜಮಾ ಖರ್ಚಿನ ಅಂಕಿಅಂಶ ತಾಳೆ ಆಗುತ್ತಿಲ್ಲವೆಂದು ಹೇಳಿದ ಮೇಳೆ ಅವರು ವರದಿಯನ್ನು 21 ತಿಂಗಳು ಕಳೆದುಹೋದ ಮೇಲೆ ಸಲ್ಲಿಸುತ್ತಾರೆ. ಇಷ್ಟು ತಿಂಗಳುಗಳ ಕಾಲ ಸರ್ಕಾರ ಏನು ಮಾಡುತ್ತಾ ಇತ್ತು? ಅದಕ್ಕೋಸ್ಕರ ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲ ಎಂದು ನಾನು ಹೇಳಿದ್ದು, ಸರ್ಕಾರ ಕಣ್ಣು ಮುಚ್ಚಿ ಕುಳಿತುಕೊಂಡಿದ್ದರೇನು? ಸಿಎಜಿ ರಿಪೋರ್ಟ್‌ನಲ್ಲಿ "The internal audit wing of the Office of the Directorate of Horticulture conducted the audit of the office of Asst. Director of Horticulture, Farm Narayanpura. However, the details of the Audit is not forthcoming in the report execpt the date of inspecting officer." ಅವರು ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಲೇ ಇಲ್ಲ. "It was observed by the party that the records, for work carried on to the tune of Rs.32 lakhs and odd and another Rs.77 lakhs andodd during 94-95 and 95-96 were not made available to the Audit. Fixed the responsibility on the Asst.Director of the Farm and the Controlling officer, Senior Asst.Director of Horticulture, Gulbarga for

the lapse. It was also observed that the proper sanction was not forthcoming for incurring these expenditures in the light of these serious financial irregularities amounting to Rs.1,09,91,600. if action had been initiated against the officer further defalcation, fraudulent withdrawing would have been averted." ಒಂದು ಕೋಟಿ 9 ಲಕ್ಷ ಚಿಲ್ಲರೆ ಹಣ ದುರುಪಯೋಗವಾಗಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. ಆಗ ಸರ್ಕಾರ ಅದರ ಬಗಗೆ ಕ್ರಮವನ್ನು ಕೈಗೊಂಡಿದ್ದರೆ the defalcation of this magnitude could have been prevented ಎಂದು ಅವರೇ ವರದಿಯಲ್ಲಿ ಹೇಳುತ್ತಾರೆ. ಇದರಲ್ಲಿ ಯಾರು ವಿಫಲರಾದರೂ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ರವರ ರಿಪೋರ್ಟ್ ದಿನಾಂಕ: 31 ಮಾರ್ಚಿ 1997.

ಶ್ರೀ ಎ.ಟಿ.ರಾಮಸ್ವಾಮಿ: ಎ.ಜಿ.ರವರ ರಿಪೋರ್ಟ್ ಬಗ್ಗೆ ಸರ್ಕಾರ ಗಮನಹರಿಸಿಲ್ಲ. ಅದಕ್ಕೆ ಸಂಬಂಧಪಟ್ಟರವರು ಶಾಮೀಲು ಆಗಿದ್ದರಿಂದ ಸರ್ಕಾರದವರು ಗಮನಹರಿಸಿದ್ದರೂ ಕೂಡ ಕಂಡು ಕಾಣದೆ ಇದ್ದ ಹಾಗೇ ಇದ್ದಿರಿ. ಈ ಅಂಕಿಅಂಶಗಳು ಟ್ಯಾಲಿ ಆಗುತ್ತಿಲ್ಲವೆಂದು ಎ.ಜಿ.ಆಫೀಸ್‌ನವರು ಬರೆಯುತ್ತಾರೆ. ಆಗ ಆಡಿಟ್ ಪಾರ್ಟಿಯವರು ಆಡಿಟ್ ವರದಿಯನ್ನು ಸಬ್‌ಮಿಟ್ ಮಾಡುತ್ತಾರೆ. ಅನಂತರ ನಿರ್ದೇಶಕರು ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್‌ರವರಿಗೆ, ಗುಲ್ಬರ್ಗ ತೋಟಗಾರಿಕೆ ನಿರ್ದೇಶಕರಿಗೆ, ಪತ್ರವನ್ನು ಬರೆದು ಕರಸ್ಪಾಂಡೆನ್ಸ್ ಮಾಡುತ್ತಾರೆ. ದಿ. 11-7-97ಕ್ಕೆ ಆಡಿಟ್ ವರದಿಯನ್ನು ಸಬ್‌ಮಿಟ್ ಮಾಡಿದರು. ಆಡಿಟ್ ಮಾಡಿ 15 ದಿವಸದೊಳಗೆ ಆಡಿಟ್ ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಬೇಕೆಂಬ ಸರ್ಕಾರಿ ನಿಯಮವಿದೆ. ಆದರೆ ಆಡಿಟ್ ಪಾರ್ಟಿಯವರು ಆ ನಿಯಮವನ್ನು ಉಲ್ಲಂಘನೆ ಮಾಡಿದರು. ಏಕೆಂದರೆ ಸಾಕಷ್ಟು ಹಣವು ಅವರ ಜೇಬು ತುಂಬಿತ್ತು, ಹಣ ವಸೂಲಿಯೂ ಆಯಿತು. ಅದಕ್ಕಾಗಿ ಅವರು ಸುಮ್ಮನಾದರು. As per chapter I of the Departmental Manual, the maximun time limit allowed for issue of Inspection Notes in Fifteen days after the conclusion of audit and the compliance had to be made within a month and thereafter further reviewed and final orders passed. However, it was noticed that in respect of the office of the Asst.Director of Horticulture Farm Narayanpura, for the period of 95-96, it was inspected by Accounts Officer of the Department Audit

Party on 25.5.95, was issued on 11.7.97, that is after a lapse of over 21 months, vide Ref.No. Horticulture department V.Ni. 14/9/94-95 dt. 11.7.97 with a copy to the Sr.Asst.Director of Horticulture, Gulbarga and the Joint Director of Horticulture, Gulbarga Division, Gulbarga for September, 1995. ಅವರು ಅಲ್ಲೇ ಹೇಳಿದ್ದು, ಈ ಮ್ಯಾಗ್ನಿಟ್ಯೂಡ್ ಏನಾಯಿತು. ಫರ್‌ದರ್ ಮಿಸ್‌ಅಪ್ರೋಪ್ರಿಯೇಷನ್ ಏನಾಯಿತು? ಕ್ರಮವನ್ನು ಕೈಗೊಂಡಿದ್ದರೆ ತಪ್ಪಿಸಬಹುದಾಗಿತ್ತು ಎಂಬ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು. ಇಲ್ಲಿಂದ ಮತ್ತೆ ಒಂದು ನಿಜವಾದ ಆಟ ಪ್ರಾರಂಭವಾಗುತ್ತದೆ.

ಉಪಾಧ್ಯಕ್ಷರು: ಇಲ್ಲಿ ಕೋರಂ ಆದ ಮೇಲೆ ಸದನವನ್ನು ನಡೆಸಬೇಕು. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಎಲ್ಲರೂ ಹೇಳಿದರು. ಧಯಮಾಡಿ ನಾನು ಹೇಳುವುದನ್ನು ಕೇಳಿ. ಸಂಬಂಧಿಸಿದ ಮಂತ್ರಿಗಳು ಇದ್ದಾರೆ, ಅವರಿಗೆ ಕರೆಯಲಿಕ್ಕೆ ಹೇಳಿದ್ದೇವೆ. ಅದಕ್ಕೆ ರಾಮಸ್ವಾಮಿಯವರಿಗೆ ಏನು ಹೇಳಿದ್ದೇವೆಂದರೆ ಸಮಯವನ್ನು ಕಳೆಯುವುದು ಬೇಡ. ತಾವು ಪ್ರಾರಂಭ ಮಾಡಿ ಎಂದು ಹೇಳಿದ ಮೇಲೆ ಅವರು ಪ್ರಾರಂಭ ಮಾಡಿದರು. ಆಡಳಿತ ಪಕ್ಷದ ಮೇಲೆ ಅಷ್ಟೇ ಅಲ್ಲ, ವಿರೋಧ ಪಕ್ಷದಲ್ಲೂ ಸಹ ಜನವಿಲ್ಲ. ಇದು ಅಕ್ಬರ್ ಮತ್ತು ಬೀರ್‌ಬಲ್‌ನ ಕಥೆಯಾಗಿ ಹೋಗಿದೆ. ಅದನ್ನು ನಾನು ಹೇಳುತ್ತಿದ್ದೇನೆ, ಒಂದೊಂದು ಸೇರು ಹಾಲನ್ನು ಹಾಕಿ ಎಂದು ಅಕ್ಬರ್ ಹೇಳಿದರೆ ಎಲ್ಲರೂ ನೀರನ್ನು ತಂದು ಹಾಕಿದರಂತೆ ಹಾಗಾಯಿತು ಈ ಪರಿಸ್ಥಿತಿ. ಅದಕ್ಕೆ ಬೆಳಿಗ್ಗೆ ಎದ್ದು ನೋಡಿದರೆ ನೀರು ಎಂದು ಗೊತ್ತಾಯಿತು. ಅದಕ್ಕೆ ಎಲ್ಲರೂ ಸದನಕ್ಕೆ ಜವಾಬ್ದಾರಿಯಿಂದ ಬರಬೇಕು.

ಶ್ರೀ ವಾಟಾಳ್ ನಾಗರಾಜ್: ನಾವು ಇಲ್ಲಿ 30 ಜನರು ಇದ್ದೇವೆ. ವಿರೋಧ ಪಕ್ಷದವರ ಮೇಲೆಯೇ ಹೇಳತಕ್ಕಂಥದಲ್ಲ, ಆಡಳಿತ ಪಕ್ಷ ಇಲ್ಲಿ ಬಹಳ ಪ್ರಾಮುಖ್ಯವಾದುದು.

ಉಪಾಧ್ಯಕ್ಷರು: ಇಲ್ಲಿ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರೂ ಸಹ ಬಹಳ ಪ್ರಾಮುಖ್ಯವಾದುದು. ಇಬ್ಬರು ಇದ್ದರೇನೇ ಸಭೆ ನಡೆಯುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ಕೆಲಸ ಮಾಡಿ, ವೋಟಿಂಗ್ ಹಾಕಿಬಿಡಿ. ಹಾಗೆ ಪಾಸು ಮಾಡುತ್ತೀರಾ?

ಉಪಾಧ್ಯಕ್ಷರು: ಯಾವುದರ ಬಗ್ಗೆ ವೋಟಿಂಗ್ ಹಾಕುವುದು. ಹಾಗೆಯೇ ಹೇಗೆ ಪಾಸು ಮಾಡುತ್ತಾರೆ. ತಾವು ನೋಟೀಸ್‌ನ್ನು ಕಳುಹಿಸಿಕೊಡಿ. ರೂಲ್-69ರಲ್ಲಿ ಡಿಬೇಟ್ ನಡೆದಿದೆ. ಈಗ ವೋಟಿಂಗ್ ಹಾಕಿ ಎಂದು ಹೇಳಿದರೆ ಹೇಗೆ ಮಾಡುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಕಡೆ 10 ಸದಸ್ಯರಿದ್ದಾರೆ, ಆ ಕಡೆ 20 ಜನ ಸದಸ್ಯರಾದರೂ ಇರಬೇಕಲ್ಲವೇ?

(ಗೊಂದಲ)

ಉಪಾಧ್ಯಕ್ಷರು: ಅವರು ಈಗ ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ವಿಧಾನಸಭೆಯ 135 ಜನ ಸದಸ್ಯರು ಮತ್ತು 42 ಜನ ಮಂತ್ರಿಗಳು ಇದ್ದು ಅವರು ಎಲ್ಲಿಗೆ ಹೋಗಿದ್ದಾರೆ? ಸಚೇತಕರು ಎಲ್ಲಿದ್ದಾರೆ? ಮುಖ್ಯಮಂತ್ರಿಗಳು ಎಲ್ಲಿ ಇದ್ದಾರೆ?

ಉಪಾಧ್ಯಕ್ಷರು: ಅವರಿಗೆ ವಿಪ್ ಕಳುಹಿಸುವ ಮುಖಾಂತರ ಹೇಳಿ ಕಳುಹಿಸಿದ್ದೇವೆ. ದಯಮಾಡಿ ಸಮಯವನ್ನು ವ್ಯಯ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್: ತಾವು ಸಮಯ ಹೋಗುತ್ತದೆ ಎಂದು ಹೇಳುವುದಲ್ಲ. ನಾನು ಬಹಳ ವಿಶ್ವಾಸದಿಂದ ತಮಗೆ ಕೇಳುತ್ತಾ ಇದ್ದೇನೆ. ಈ ರೀತಿಯಾದರೆ ಸದನಕ್ಕೆ ಅಗೌರವವಾಗುತ್ತದೆ. ಇವರು ಏತಕ್ಕೆ ಸದನವನ್ನು ಕರೆಯಬೇಕಾಗಿತ್ತು? ಸದನವನ್ನು ಕರೆದ ಮೇಲೆ ಇವರು ಸಚಿವಸಂಪುಟದ ಜನ ಇಲ್ಲಿ ಇರಬೇಕಾಗಿತ್ತು. ಕನಿಷ್ಟ ವಿಧಾನಪರಿಷತ್‌ಗೆ 20 ಜನ ಹೋದರೆ ಇಲ್ಲಿ 15 ಜನ ಇರಬೇಕಾಗಿತ್ತು. ನಮ್ಮಲ್ಲಿ 15 ಜನ ಮಂತ್ರಿಗಳು ಇರಬೇಡವೇ? ಶಾಸಕರು ಬೇಡವೇ, ನಿಮ್ಮ ಜನತಾದಳದ ರಾಜಕೀಯಕೋಸ್ಕರವಾಗಿ ಎಲ್ಲೆಲ್ಲೋ ಸಭೆಗಳನ್ನು ನಡೆಸುತ್ತಿದ್ದಾರೆ. ಈ ಸದನದ ಗತಿ ಏನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ್‌ರವರು ಸದನದಲ್ಲಿ ಕುಳಿತಿದ್ದಾರೆ. ಅವರ ಬಗ್ಗೆ ನನಗೆ ಬಹಳ ನಂಬಿಕೆ ಇದೆ. ಅವರು ಏನಾದರೊಂದು ಹೇಳಿಬಿಡಲಿ ನಾವು ನಂಬಿ ಸುಮ್ಮನೆ ಇದ್ದು ಬಿಡುತ್ತೇವೆ. ನಿಮಗೆ ಏನಾದರೂ ತೊಂದರೆಯಾಗುತ್ತದೆಯೇ ಹೇಳಿ.

ಉಪಾಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ನಾವು ಸಭೆಯನ್ನು 2-30 ಗಂಟೆವರೆಗೆ ಲಂಚ್‌ಗೋಸ್ಕರ ಮುಂದಕ್ಕೆ ಹಾಕಿದ್ದೆವು. ಅನಂತರ ನಾವು 2-45ಕ್ಕೆ ಬೆಲ್‌ನ್ನು ಹಾಕಿದ್ದೇವೆ. ತಾವು ಎಷ್ಟು ಹೊತ್ತಿಗೆ ಸದನಕ್ಕೆ ಬಂದಿರಿ? ಹೇಳಿ. ಇಲ್ಲಿ ಪ್ರತಿಯೊಬ್ಬರದ್ದು ಜವಾಬ್ದಾರಿ ಇದೆ. ಅವರು ಅಷ್ಟೇ ಜವಾಬ್ದಾರರಲ್ಲ. ಈ ಸಭೆಯ ಪ್ರತಿಯೊಬ್ಬ ಸದಸ್ಯರು ಇದಕ್ಕೆ ಜವಾಬ್ದಾರರು, ಈ ಸಭೆ ನಡೆಸುವುದಕ್ಕೆ, ಈ ಸದನ ನಡೆಸುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್: ನಮ್ಮ ವಿರೋಧ ಪಕ್ಷದಲ್ಲಿ ಆ ರೀತಿ ಲೋಪ ಇದ್ದರೆ

ತೋರಿಸಿ. ಕಡತ ತನ್ನಿ. ನಾನು ಒಂದು ದಿನ ಕೂಡ ಗೈರು ಹಾಜರಿ ಆಗಿರತಕ್ಕದ್ದು ಇಲ್ಲ.

ಉಪಾಧ್ಯಕ್ಷರು: ನಾನು ವೈಯಕ್ತಿಕವಾಗಿ ನಿಮಗೆ ಹೇಳುವುದು ಅಲ್ಲ. ಎಲ್ಲರೂ ತಿಳಿದುಕೊಂಡು ನಡೆಯಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲರೂ ಎಂದು ಹೇಳಬೇಡಿ. ಅವರ ಸಂಖ್ಯೆ 135. ಅವರ ಸಂಖ್ಯೆಗೂ ನಮ್ಮ ಸಂಖ್ಯೆಗೂ ಹೋಲಿಕೆ ಮಾಡಿ ನೋಡಿ. ನಾವು ಇಲ್ಲಿ 30 ಜನರಿದ್ದೇವೆ.

ಉಪಾಧ್ಯಕ್ಷರು: ನಾವು ಕರೆದು ಹೇಳಿದ್ದೇವೆ, ಸರ್ಕಾರದವರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ಬೇರೆ ವಿಧಾನ ಇಲ್ಲ. ಇಲ್ಲಿ ನಾವು ಕುಳಿತುಕೊಳ್ಳುವ ಬದಲು ನಾವು ಏನು ಮಾಡುತ್ತಿದ್ದೇವೆಂದರೆ, ಇಲ್ಲೇ ಒಳಗಡೆ ಕುಳಿತುಕೊಳ್ಳುತ್ತೇವೆ. ಅವರು ಬರಲಿ, ಕನಿಷ್ಟ 50 ಜನ ಸದಸ್ಯರು ಬರುವರೆಗೆ ಒಳಗೆ ಕುಳಿತಿರುತ್ತೇವೆ. ಇದೊಂದು ಹೊಸ ಅಧ್ಯಾಯ ಪ್ರಾರಂಭವಾಗಲಿ.

(ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಹೂಡಿದರು)

ಉಪಾಧ್ಯಕ್ಷರು: ನಾಗರಾಜ್ ಅವರೆ, ದಯಮಾಡಿ ಬೇಡ, ಈ ತರಹ ಮಾಡುವುದು ಬೇಡ.

(ಶ್ರೀ ವಾಟಾಳ್ ನಾಗರಾಜ್ ಅವರು ವೆಲ್‌ನಿಂದ ಮಾತನಾಡಿದರು)

ಶ್ರೀ ಜಿ.ಶ್ರೀರಾಮರೆಡ್ಡಿ: ಸದನದಲ್ಲಿ ಸದಸ್ಯರು ಇಲ್ಲದಿದ್ದರೆ ನಾವು ಹೇಗೆ ಮಾತನಾಡಬೇಕು, ಏನು ಮಾತನಾಡಬೇಕು?

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ರಾಮಸ್ವಾಮಿಯವರು ಬೆಳಗಿನಿಂದ ಗಂಭೀರವಾಗಿ ಪ್ರಸ್ತಾಪ ಮಾಡುತ್ತಿರುವುದು ನೋಡಿದರೆ, ಈ ಸರ್ಕಾರವನ್ನು ಕಂಡರೆ ಅಧಿಕಾರಿಗಳಿಗೆ ತಿರಸ್ಕಾರ, ನಾವು ಏನು ಬೇಕಾದರೂ ಮಾಡಬಹುದೆಂದು ಅವರ ಭಾವನೆ. ಸರ್ಕಾರಕ್ಕೆ ಸದನವನ್ನು ಕಂಡರೆ ತಿರಸ್ಕಾರ; ನಾವು ಏನು ಬೇಕಾದರೂ ಮಾಡಬಹುದು ಎಂದು. ನಾವು ಬಾರದಿದ್ದರೂ ಆಗುತ್ತದೆ, ಏನೋ ಅವರು ಕೂಗುವುದು ಕೂಗಿಕೊಳ್ಳುತ್ತಾರೆ ಎಂದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಷ್ಟು ಲಘುವಾಗಿ ಆಡಳಿತ ಪಕ್ಷದವರು ತೆಗೆದುಕೊಳ್ಳುವುದು ಸರಿಯಲ್ಲ. ನಾನು ಕೂಡ ಧರಣಿಗೆ ಹೋಗುತ್ತೇನೆ.

(ಶ್ರೀ ಶ್ರೀರಾಮರೆಡ್ಡಿಯವರು ಧರಣಿ ಹೂಡಿದರು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ನಾವು ಏತಕ್ಕೆ ಸುಮ್ಮನೆ ಕುಳಿತಿದ್ದೇವೆಂದರೆ ನಮಗೆ ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಸುಮ್ಮನೆ ಕುಳಿತಿದ್ದೇವೆ. ತಾವು ಎತ್ತಿರತಕ್ಕ ಪ್ರಶ್ನೆ ಸಮಂಜಸವಾದುದು. ನಾವು ಹೇಳಿದ್ದೇವೆ ಚೀಫ್ ವಿಪ್ ತಿರುಗಾಡುತ್ತಿದ್ದಾರೆ.

ಶ್ರೀ ಎ.ರುಕ್ಮಯ್ಯ ಪೂಜಾರಿ: ಆಡಳಿತ ಪಕ್ಷಕ್ಕೆ ಇಂಥಪರಿಸ್ಥಿತಿ ಬರಬಾರದಾಗಿತ್ತು.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ನಾವು ಹೇಳಿದ್ದೇವೆ, ಬರುತ್ತಿದ್ದಾರೆ. ಮಂತ್ರಿಗಳು ಆ ಮನೆಯಲ್ಲಿ ಇದ್ದಾರೆ. ಒಂದೊಂದು ದಿನ ಈ ರೀತಿ ಆಗುತ್ತದೆ. ಇದು ಆಗಬಾರದಾಗಿತ್ತು. ಸದಸ್ಯರು ಎಲ್ಲರೂ ಇರಬೇಕಾಗುತ್ತದೆ. ಇದರ ಬಗ್ಗೆ ತಕರಾರು ಇಲ್ಲ. ನಾವು ಈಗ ಹೇಳಿ ಕಳುಹಿಸಿದ್ದೇವೆ, ಬರುತ್ತಾರೆ. ದಯಮಾಡಿ ನೀವು ನಿಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ನಾಳೆ ಇದನ್ನು ಸರಿ ಮಾಡೋಣ.

ಉಪಾಧ್ಯಕ್ಷರು: ನಾಗರಾಜ್ ಅವರೆ, ದಯಮಾಡಿ ತಾವು ತಮ್ಮ ಸ್ಥಾನಗಳಿಗೆ ಹೋಗಿ. ಮಾನ್ಯ ಉಪ ಮುಖ್ಯ ಮಂತ್ರಿಗಳೂ ಕೂಡ ಸರ್ಕಾರದ ವತಿಯಿಂದ ಹೇಳುತ್ತಿದ್ದಾರೆ. ರೆಡ್ಡಿಯವರೇ, ತಾವು ತಮ್ಮ ಸ್ಥಾನಕ್ಕೆ ಹೋಗಿ...

(ಶ್ರೀ ರೆಡ್ಡಿಯವರು ಮತ್ತು ಶ್ರೀ ನಾಗರಾಜ್ ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಆಸೀನರಾದರು)

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಉಪ ಮುಖ್ಯಮಂತ್ರಿಗಳು ಬೀಸುವ ದೊಣ್ಣೆ ತಪ್ಪಿಸಿಕೊಂಡರೆ ಸಾಕು ಎಂದು ನಾಳೆಯಿಂದ ಸರಿ ಮಾಡುತ್ತೇವೆಂದು ಹೇಳುತ್ತಾರೆ. ನಾಳೆಯಿಂದ ಸರಿ ಮಾಡಿಸುವ ವಿಶ್ವಾಸ ನಿಮಗೆ ಇದೆಯೆ?

ಶ್ರೀ ಸಿದ್ದರಾಮಯ್ಯ: ನಾಳೆ ಎಲ್ಲಾ ಬರುತ್ತಾರೆ ಕುಳಿತುಕೊಳ್ಳಿ.

ಶ್ರೀ ಎಸ್.ಸುರೇಶ್ ಕುಮಾರ್: ಇವತ್ತು ಏತಕ್ಕೆ ಆಗಿಲ್ಲ? ಅವರೇನು ಅನುಗ್ರಹಕ್ಕೆ ಹೋಗಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ: ಅನುಗ್ರಹ ಪುಣ್ಯ ಕಟ್ಟಿಕೊಂಡು ಇವರಿಗೆ ಏನಾಗಬೇಕು?

ಉಪಾಧ್ಯಕ್ಷರು: ಅವರು ಎಲ್ಲಿಯಾದರೂ ಹೋಗಲಿ, ಏನಾದರೂ ಮಾಡಲಿ, ಸಮಯಕ್ಕೆ ಸರಿಯಾಗಿ ಇಲ್ಲಿ ಬರಲಿ. ಅನುಗ್ರಹಕ್ಕಾದರೂ ಹೋಗಲಿ, ಪುಣ್ಯಕ್ಕಾದರೂ ಹೋಗಲಿ, ಪರಮೇಶ್ವರನ ಕಡೆಗಾದರೂ ಹೋಗಲಿ, ನಮ್ಮ ತಕರಾರು ಇಲ್ಲ. ನಮಗೆ ಸಮಯಕ್ಕೆ ಸರಿಯಾಗಿ ಬಂದರೆ ಸಾಕು.

(ಗೊಂದಲ)

ಸಗೀರ್ ಅವರೇ ಕುಳಿತುಕೊಳ್ಳಿ, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಂತ್ರಿಗಳು ಇರಬೇಕು, ಶಾಸಕರು ಇರಬೇಕು, ಅಧಿಕಾರಿಗಳು ಇರಬೇಕು, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಸದಸ್ಯರು ಏನೇ ರಾಜಕಾರಣ ಮಾಡಿಕೊಳ್ಳಲಿ, ಅನುಗ್ರಹಕ್ಕಾದರೂ ಹೋಗಲಿ, ಪುಣ್ಯಕ್ಕಾದರೂ ಹೋಗಲಿ. ಅದಕ್ಕೆ ನಮ್ಮ ತಕರಾರು ಇಲ್ಲ. ಅನುಗ್ರಹ, ಪುಣ್ಯ ಎರಡನ್ನೂ ಮೀರಿದ್ದು ಸದನ. ಆದುದರಿಂದ ಈ ಸದನಕ್ಕೆ ಗೌರವ ಕೊಡಬೇಕು. ಸದನ ಬಹಳ ಪ್ರಾಮುಖ್ಯವಾದುದು.

ಶ್ರೀ ಸಿ.ಎಸ್.ಪುಟ್ಟೇಗೌಡ: ನಮ್ಮ ಗಂಭೀರವಾದ ಸಮಸ್ಯೆಗಳನ್ನು ಪಕ್ಷಾತೀತವಾಗಿ ಈ ಭಾಗದ ಮತ್ತು ಆ ಭಾಗದ ಸದಸ್ಯರು ಚರ್ಚೆ ಮಾಡದೆ ಅದು ಮುಂದಿನ ಬೆಂಚಿಗೆ ಮತ್ತು ನಿಮ್ಮ ಭಾಗದ ಶಾಸಕರಿಗೆ ಅಷ್ಟೇ ಸೀಮಿತವಾಗಿದೆ. ಈ ಭಾಗದ ಶಾಸಕರು ಏತಕ್ಕೆ ಕುಳಿತುಕೊಳ್ಳುವುದಿಲ್ಲವೆಂದರೆ.. (ಗೊಂದಲ)

ಉಪಾಧ್ಯಕ್ಷರು: ಆ ತರಹ ಏನೂ ಇಲ್ಲ. ಸದನದ ಎಲ್ಲಾ ಸದಸ್ಯರಿಗೆ ಅವಕಾಶ ಇದೆ. ಸದನದ ಎಲ್ಲಾ ಸದಸ್ಯರಿಗೆ ಅವಕಾಶ ಕೊಡುವ ಜವಾಬ್ದಾರಿ ಈ ಸದನದ ಅಧ್ಯಕ್ಷರಿಗೆ ಇದೆ. ತಾವು ದಯಮಾಡಿ ಕುಳಿತುಕೊಳ್ಳಿ. ರೆಡ್ಡಿಯವರೇ ಕುಳಿತುಕೊಳ್ಳಿ. ನಿಮಗೆ ಯಾವ ತರಹ ಹೇಳಬೇಕು? ಕನ್ನಡ ಅರ್ಥವಾಗುವುದಿಲ್ಲವೇ ನಿಮಗೆ?

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ನಿರ್ಲಕ್ಷ್ಯತೆಯಿಂದ 5 ಕೋಟಿ ರೂಪಾಯಿ ಸಾರ್ವಜನಿಕರ ಹಣ ಲೂಟಿಯಾಗಿದೆ. ಅವರೇ ಚರ್ಚೆ ಮಾಡುವುದಾದರೆ ನಾನು ಅವರಿಗೆ ಅವಕಾಶ ಮಾಡಿಕೊಟ್ಟು ಕುಳಿತುಕೊಳ್ಳುತ್ತೇನೆ. ನೀವು ಚರ್ಚೆ ಮಾಡಿ, ನಾವು ಖಂಡಿತ ಸ್ವಾಗತಿಸುತ್ತೇವೆ.

ಉಪಾಧ್ಯಕ್ಷರು: ರಾಮಸ್ವಾಮಿಯವರೆ, ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ, ತಾವು ದಯಮಾಡಿ ಮುಂದುವರಿಸಿ. ನೀವು ಆ ಕಡೆ ನೋಡಬೇಡಿ; ಮುಂದುವರಿಸಿ.

ಶ್ರೀ ಎ.ಟಿ.ರಾಮಸ್ವಾಮಿ: ಅವರು ಚರ್ಚೆ ಮಾಡಲಿ. ಅವರಿಗೆ ಸಾರ್ವಜನಿಕರ ಹಿತದ ಮೇಲೆ ಆಸಕ್ತಿ ಇದೆ ಎಂದು ಭಾವಿಸಿ ಅವರೇ ಚರ್ಚೆ ಮಾಡಲಿ ಎಂದು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು: ನಾವು ಛೇರ್‌ನಿಂದ ಏನು ಹೇಳುತ್ತೇವೆ ಅದನ್ನು ದಯಮಾಡಿ ಕೇಳಬೇಕು. ಇಲ್ಲದಿದ್ದರೆ, ನೀವು ತಿಳಿದದ್ದೇ ಮಾಡುತ್ತೇವೆಂದರೆ ಹೇಳಿ, ಅದಕ್ಕೆ ಮುಂದೆ ಏನು ಮಾಡಬೇಕೆಂದು ನಮಗೆ ಗೊತ್ತಿದೆ, ಮಾಡುತ್ತೇವೆ. ನೀವು ಪ್ರತಿಯೊಂದು ಸಾರಿ

ಈ ರೀತಿ ಎದ್ದುನಿಂತು ಚರ್ಚೆಗೆ ಅಡ್ಡಿಪಡಿಸುವುದು ಸರಿಯಲ್ಲ ಮತ್ತು ಒಳ್ಳೆಯದಲ್ಲ.

ಶ್ರೀ ಯು.ಬಿ.ಬಣಕಾರ್: ಈ ವಿಚಾರ ಪ್ರಸ್ತಾಪ ಮಾಡುವುದನ್ನು ಕೇಳಬೇಕೆಂಬ ಆತುರತೆ ನಮಗೂ ಇತ್ತು. ಅದಕ್ಕೋಸ್ಕರ ಕುಳಿತು ಸಹಕಾರ ಕೊಡಿ ಎಂದು ನಾವು ಅವರಿಗೆ ಹೇಳುತ್ತಿದ್ದೇವೆ. ಪದೇಪದೇ ಯಾವುದೂ ಇರಲಾರದೆ ಸುಮ್ಮನೆ ಶಬ್ದ ತೆಗೆದು ಶ್ರೀ ವಾಟಾಳ್ ನಾಗರಾಜ್ ಅವರು ಇಂಟರಫ್ಟ್ ಮಾಡುವುದು ನಮಗೆ ಸರಿ ಅನ್ನಿಸುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಅವರು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು: ಈಗ ನೀವು ಸ್ವಲ್ಪ ಸುಮ್ಮನೆ ಇದ್ದುಬಿಡಿ. ರಾಮಸ್ವಾಮಿಯವರೇ ದಯಮಾಡಿ ಮುಂದುವರಿಸಿ.

ಶ್ರೀ ಎ.ಟಿ.ರಾಮಸ್ವಾಮಿ: ಆ ಭಾಗದ ಸದಸ್ಯರಿಗೆ ಇಚ್ಛೆ ಇದ್ದರೆ, ಪೊಲಿಟಿಕಲ್ ವಿಲ್ ಇದ್ದರೆ ದಯಮಾಡಿ ಚರ್ಚೆ ಮಾಡಲಿ, ನಾವು ಅವಕಾಶ ಮಾಡಿಕೊಡುತ್ತೇವೆ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ: ಇಲ್ಲಿ ಅವರ ಅಭಿಪ್ರಾಯ ಬೇರೆ ತಿಳಿಸಿದ್ದಾರೆ. ಈ ಭಾಗದವರ ವಿಚಾರವೇನೆಂದರೆ, ರಾಮಸ್ವಾಮಿಯವರು ಮಾತನಾಡುವುದಕ್ಕಾಗಲಿ, ಚರ್ಚೆ ಮಾಡುವುದಕ್ಕಾಗಲಿ, ಅದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಈ ಶಾಸನಸಭೆಯಲ್ಲಿ ಅಲ್ಲಿ ಕುಳಿತಿರುವವರಿಗೆ ಇಲ್ಲಿ ಕುಳಿತರೆ ಗೊತ್ತಾಗುತ್ತದೆ. ಶಾಸಕರನ್ನು ಶಾಸಕರು ಎಂದು ಕೂರಿಸಿಕೊಂಡಿದ್ದೀರಾ ಅಥವಾ ಏನು? ಆ ಕಡೆ ಅಷ್ಟೇ ಜನ ಅಭಿಪ್ರಾಯ ಕೊಡುತ್ತಾರೋ ಏನು? ಈ ಭಾಗದ ಯಾವುದೇ ಶಾಸಕರು ಮಧ್ಯೆ ಬಾಯಿ ಹಾಕಿದರೆ ಅದಕ್ಕೆ ಅವಕಾಶ ಇರುವುದಿಲ್ಲ. ಬಹುಶಃ ನಾವೂ ಶಾಸಕರಾಗಿ ಬಂದಿದ್ದೇವೆಂಬುದು ಯಾರಿಗೂ ಗಮನದಲ್ಲಿ ಇಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷರು: ಆ ರೀತಿ ಏನೂ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಚರ್ಚೆ ಮಾಡುವುದಕ್ಕೆ ನಾವು ಅಡ್ಡಿ ಮಾಡಿದ್ದರೆ ಅಪವಾದ ಮಾಡಲಿ. ನಾವು ಎಂದಾದರೂ ಅಡ್ಡಿ ಮಾಡಿದ್ದೇವೆಯೇ? ಅವರು ಯಾರ ಜೊತೆಯಾದರೂ ಚರ್ಚೆ ಮಾಡುವುದಕ್ಕೆ ಅಡ್ಡಿ ಮಾಡಿದ್ದೇವೆಯೆ? ಅವರಿಗೆ ಅವಕಾಶ ಕೊಡಬೇಡಿ ಎಂದು ಹೇಳಿದ್ದರೆ ಹೇಳಲಿ. ಏತಕ್ಕೆ ಸುಮ್ಮನೆ ಅವರು ನಮ್ಮ ಮೇಲೆ ಆಪಾದನೆ ಮಾಡಬೇಕು?

ಶ್ರೀ ಸಿ.ಎಸ್.ಪುಟ್ಟೇಗೌಡ: ನಮಗೆ ಅವಕಾಶ ಕಡಿಮೆ ಇದೆ ಎಂದು ಹೇಳುತ್ತಿದ್ದೇವೆ. ಆ ಭಾಗದವರಿಗೆ ಹೆಚ್ಚು ಅವಕಾಶ ಕೊಡುತ್ತಿದ್ದೀರಿ, ನಮಗೆ ಕೊಡುತ್ತಿಲ್ಲವೆಂದು ಹೇಳುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಮ್ಮ ಅಧಿಕಾರವನ್ನು ನಾವು ಕಿತ್ತುಕೊಂಡಿಲ್ಲ.

ಶ್ರೀ ಸಿ.ಎಸ್.ಪುಟ್ಟೇಗೌಡ: ಇದು ಇವತ್ತು ಒಂದು ದಿನದ ವಿಚಾರ ಅಲ್ಲ. ನಾವು ಮೂರೂವರೆ ವರ್ಷಗಳಿಂದ ಕಂಡದ್ದು. ಹೊಸ ಶಾಸಕರಾಗಿ ನೀವೇ ಈ ಭಾಗದಲ್ಲಿ ಕುಳಿತುಕೊಳ್ಳಿ, ಗೊತ್ತಾಗುತ್ತದೆ.

3.40 ಪಿಎಂ

ಶ್ರೀ ಎ.ಟಿ.ರಾಮಸ್ವಾಮಿ: ಸರ್ಕಾರ ನಾನು ಪ್ರಸ್ತಾಪ ಮಾಡುವ ವಿಷಯದ ಬಗ್ಗೆ ಎಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ಸದನದ ಮೂಲಕ ಸಾರ್ವಜನಿಕರ ಗಮನಕ್ಕೆ ತರುತ್ತಿದ್ದೇನೆ. ಆವೊಂದು ಉದ್ದೇಶದಿಂದ ಪ್ರಸ್ತಾಪ ಮಾಡಿದಾಗ ಸರ್ಕಾರಕ್ಕೆ ನೈತಿಕತೆ ಇದ್ದರೆ ನೈತಿಕತೆಯ ಜವಾಬ್ದಾರಿಯನ್ನು ಹೊತ್ತು ಅವರು ಕ್ರಮ ತೆಗೆದುಕೊಳ್ಳಲಿ. ಎಷ್ಟರಮಟ್ಟಿಗೆ ನೈತಿಕತೆ ಇದೆ ಎಂಬುದನ್ನು ಮುಂದೆ ಹೇಳುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್: ನೈತಿಕತೆ ಇರುವುದಕ್ಕೆ, ಇಲ್ಲಿ ನೀವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದು.

ಶ್ರೀ ವಾಟಾಳ್‌ನಾಗರಾಜ್: ಏನು ವಿಷಯ: ಇದು ಕೃಪೆ ಅಲ್ಲ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಸದನದ ಎಲ್ಲಾ ಸದಸ್ಯರಿಗೆ ನೈತಿಕತೆ ಇದೆ. ಕೃಪೆ ಅಲ್ಲ ನಿಯಮಾವಳಿ ಪ್ರಕಾರ ಮಾತನಾಡುತ್ತಿದ್ದೇವೆ. ಕೃಪೆ ಇರುವುದು ನಿಮ್ಮ ಹಾರ್ಟಿಕಲ್ಚರ್ ಸೂಪರಿಂಟೆಂಡೆಂಟ್‌ರವರ ಮೇಲೆ. ನಮ್ಮ ಮೇಲೆ ಅಲ್ಲ. ನಾವು ಮಾತನಾಡಲಿಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ. ನೀವು ಹೇಳುವುದು ಕೃಪೆ ಅಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಜಯಕುಮಾರ್‌ರವರ ಆಶೀರ್ವಾದದಿಂದ ನಾವೇನೂ ಮಾತನಾಡುತ್ತಿಲ್ಲ. ಅವರ ಕೃಪೆ ನಮಗೆ ಬೇಕಾಗಿಲ್ಲ. ಸದನದ ನಿಯಮಾವಳಿ ಪ್ರಕಾರ ನಾವು ಮಾತನಾಡುತ್ತಿದ್ದೇವೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ಸಚಿವರು): ನಾನು ಹೇಳುವುದನ್ನು ದಯವಿಟ್ಟು ಕೇಳಿ. ಸುರೇಶ್‌ಕುಮಾರ್‌ರವರು ನಾನು ಹೇಳುವುದನ್ನು ಒಪ್ಪಿಕೊಳ್ಳುತ್ತಾರೆ. ಕೋಣ ಕರು ಹಾಕಿತು ಅಂದರೆ ಕೊಟ್ಟಿಗೆಗೆ ಕಟ್ಟು ಅನ್ನುವ ಹಾಗೆ ಇಷ್ಟುಬೇಗ ಎದ್ದುಬಿಟ್ಟರೆ ಹೇಗೆ? ಬೆಳಿಗ್ಗೆ ಶೂನ್ಯವೇಳೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿದೆ. ಈ ವಿಚಾರ ನಮಗೆ ಗೊತ್ತಿಲ್ಲ. ಶೂನ್ಯವೇಳೆಯಲ್ಲಿ ಚರ್ಚೆಯಾದ ಮೇಲೆ ಅರ್ಧಗಂಟೆ ಚರ್ಚೆ ಈಗ ನಡೆಯುತ್ತಿದೆ. ಬೆಳಿಗ್ಗೆ ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೆಂದು

ಹೇಳಿದ್ದಾರೆ. ನಮಗೂ ಕೂಡ ಇದರ ಬಗ್ಗೆ ಮಾಹಿತಿಯಿಲ್ಲ. ಯಾವಾಗ ಅಂತ ಗೊತ್ತಿಲ್ಲ. ವಿಷಯ ಪೂರ್ಣವಾಗಿ ಗೊತ್ತಿಲ್ಲ. ಸರ್ಕಾರಕ್ಕೆ ಉತ್ತರ ಕೊಡಲಿಕ್ಕೆ ಸಮಯ ಬೇಡವೆ? ನೀವು ಕೇಳಿರತಕ್ಕ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬೇಕಾದರೆ ನಮಗೆ ಸಾಕಷ್ಟು ಅವಕಾಶ ಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ರೆಕಾರ್ಡ್ ತರಿಸಬಹುದು. ಮಾನ್ಯ ರಾಮಸ್ವಾಮಿಯವರಿಗೆ ರೆಕಾರ್ಡ್ ಹೇಗೆ ಸಿಕ್ಕಿದೆಯೋ ಗೊತ್ತಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರುಗಳನ್ನು ನೋಡಿಕೊಂಡು ಹೇಳುತ್ತಿದ್ದಾರೆ. ತಾವು ಅಧ್ಯಕ್ಷರಿಗೆ ಹೇಳಿ. ನಮಗೆ ಹೇಳಬೇಡಿ.

ಶ್ರೀ ಡಿ.ಟಿ.ಜಯಕುಮಾರ್: ನಾನು ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ನಾಳೆಯವರೆಗೆ ಸಮಯ ಕೊಟ್ಟಿದ್ದರೆ ಉತ್ತರ ಕೊಡಲಿಕ್ಕೆ ಚೆನ್ನಾಗಿರುತ್ತಿತ್ತು.

ಶ್ರೀ ಸಿ.ಆರ್.ಸಗೀರ್‌ಅಹ್ಮದ್: ನಾವು ನಮ್ಮ ಇಷ್ಟಕ್ಕೆ ಹೇಳುವ ಅಗತ್ಯವಿಲ್ಲ. ನೀವು ಯಾವಾಗ ಯಾವ ವಿಷಯ ಪ್ರಸ್ತಾಪ ಮಾಡಬೇಕೆಂದು ಹೇಳುವ ಅಗತ್ಯವಿಲ್ಲ. ಯಾವ ವಿಷಯವನ್ನು ಯಾವ ಸಂದರ್ಭದಲ್ಲಿ ಮಂಡನೆ ಮಾಡಬೇಕೆಂದು ನಮಗೆ ಗೊತ್ತಿದೆ. ನಿಮಗೆ ಸಮಯ ಬೇಕಾದರೆ ಅಧ್ಯಕ್ಷರ ಹತ್ತಿರ ಕೇಳಿ.

ಶ್ರೀ ಡಿ.ಟಿ.ಜಯಕುಮಾರ್: ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ. ಏನೇನು ಅನ್ಯಾಯವಾಗಿದೆ ಎಂಬುದನ್ನು ಅವರು ಹೇಳಲಿ. ಈ ವಿಷಯ ಈಗಾಗಲೇ ಲೋಕಾಯುಕ್ತದಲ್ಲಿದೆ.

ಉಪಾಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೇ, ಹೀಗೆ ಪದೇ ಪದೇ ಎದ್ದುನಿಂತರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ದೀರ್ಘವಾಗಿ ಎಳೆಯಬೇಕಾಗಿಲ್ಲ. ಮಾನ್ಯ ಮಂತ್ರಿಗಳು ಹೇಳಿದ್ದು ಇಷ್ಟು ನೈತಿಕವಾಗಿರತಕ್ಕ ವಿಚಾರಗಳಿಗೆ ಸಮಯ ಬೇಕು ಎಂದು. ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನೀವು ಮಾತನಾಡತಕ್ಕ ಬಗ್ಗೆಯಾಗಲೀ ಮಾತನಾಡಬಾರದೆಂದಾಗಲೀ ಆ ಮಾತು ಇಲ್ಲ. ನಮಗೂ ನೈತಿಕತೆ ಇದೆ ನಾನು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆ ಮಧ್ಯೆ ಕಾಲಾವಕಾಶವನ್ನು ಕೊಟ್ಟಿದ್ದು ನಿಜ. ಇದ್ದಕ್ಕಿದ್ದ ಹಾಗೆ ಈ ಸಮಸ್ಯೆ ಉದ್ಭವವಾಗಿಲ್ಲ. ಸರ್ಕಾರದ ಗಮನಕ್ಕೆ ಇದು ಬಂದಿದೆ. ಮಂತ್ರಿಗಳು ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇವೆಂದು ಹೇಳಿದರು. ಹಾಗಾದರೆ ಸರ್ಕಾರ ಇದರ ಬಗ್ಗೆ ಗಮನಹರಿಸಿದೆ. ಗಮನಹರಿಸಿದ್ದರೆ ನಾನು ಹೇಳಿದ್ದು ನೈತಿಕತೆಯಿದ್ದರೆ ಆ

ನೈತಿಕತೆಯ ಆಧಾರದ ಮೇಲೆ ಏನು ತಮ್ಮ ತೀರ್ಮಾನ? ನಾನು ಬಳಸಿದ ಪದ ಅಸಂಸದೀಯ ಪದ ಅಂದರೆ ಅದನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಜವಾಬ್ದಾರಿಯನ್ನು ಹೊರಬೇಕೆನ್ನತಕ್ಕ ಮಾತನ್ನು ಹೇಳಿದ್ದೇನೆ. ಇನ್‌ಚಾರ್ಜ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಅವರನ್ನು 1996ನೇ ಇಸವಿಯಲ್ಲಿ ಜೂನ್ ತಿಂಗಳಿನಲ್ಲಿ ವರ್ಗ ಮಾಡಿದ್ದಾರೆ. ಅವನ ಜಾಗಕ್ಕೆ ಯಾರನ್ನೂ ಹಾಕಲಿಲ್ಲ. ಅವನ ವರ್ಗಾವಣೆಯನ್ನು ರದ್ದುಪಡಿಸಿ ಮತ್ತೆ ಅದೇ ಜಾಗದಲ್ಲಿ ಮುಂದುವರಿಸಿಕೊಂಡು ಹೋದರು. ಜಾಯಿಂಟ್ ಡೈರೆಕ್ಟರ್ ಗುಲ್ಬರ್ಗ, ಕೇಂದ್ರ ಕಛೇರಿಗೆ ಬರೆದರು. ತದನಂತರ ಕೇಂದ್ರ ಕಛೇರಿಯಿಂದ ಒಬ್ಬರು ಆಫೀಸರನ್ನು ಕಳುಹಿಸಿದರು. ಅವರು ಕೂಡ ಹೋಗಿ ನೋಡಿಕೊಂಡು ಬಂದರು. ಹೋಗಿ ನೋಡಿಕೊಂಡು ಬಂದು ಅಲ್ಲಿ ದುರುಪಯೋಗವಾಗಿದೆಯೆಂದು ವರದಿಕೊಟ್ಟರು. ಆ ವರದಿಯ ಆಧಾರದ ಮೇಲೆ ಸಂಬಂಧಪಟ್ಟಂತಹ ಇನ್‌ಚಾರ್ಜ್ ಅಸಿಸ್ಟೆಂಟ್ ಡೈರೆಕ್ಟರ್ ಹಾರ್ಟಿಕಲ್ಚರ್ ಅವರನ್ನು 1996ರಲ್ಲಿ ಅಮಾನತ್ತುಗೊಳಿಸಿದ್ದಾರೆ. ಅಮಾನತ್ತು ಮಾಡಿದ್ದು ಅದೆಲ್ಲಾ ನಿಜ. ಒಂದು ಚಿತ್ರ ಶುರುವಾಗುತ್ತದೆ. 12ನೇ ತಿಂಗಳು 1996ನೇ ಇಸವಿಯಲ್ಲಿ ಅಮಾನತ್ತು ಮಾಡಿದರು. ಅಮಾನತ್ತು ಮಾಡಿದ್ದು ಒಂದೂವರೆ ತಿಂಗಳಿನಲ್ಲಿ ರದ್ದಾಯಿತು. ರದ್ದು ಮಾಡಿ ಎಲ್ಲಿಗೆ ವರ್ಗ ಮಾಡಿದರು, ಅದೇ ಆಫೀಸಿಗೆ ಅದೇ ಸ್ಥಳಕ್ಕೆ ರೀಇನಸ್ಟೇಟ್ ಮಾಡಿದರು. ಅದಕ್ಕೆ ನಾನು ಹೇಳಿದ್ದು ಮೊದಲು ಕರ್ನಾಟಕ ಆಡಳಿತಾತ್ಮಕ ಇತಿಹಾಸದಲ್ಲಿ ಇಂತಹ ಸತ್‌ಸಂಪ್ರದಾಯವನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಇದೇ ಜಾಗಕ್ಕೆ ರೀಇನ್‌ಸ್ಟೇಟ್ ಮಾಡಲಿಕ್ಕೆ ಎಲ್ಲಿಂದ ಪತ್ರ ವ್ಯವಹಾರಗಳು ನಡೆದಿದೆ? ನಾವು ಯಾವುದನ್ನು ಹೈಯೆಸ್ಟ್ ಅಥಾರಿಟಿ ಅಥವಾ ಬಾಡಿಯೆಂದು ಕರೆಯುತ್ತೇವೆ, ರಾಜ್ಯಸರ್ಕಾರದ ಮುಖ್ಯಮಂತ್ರಿಗಳ ಆಫೀಸಿನಿಂದ ಅವರನ್ನು ಅದೇ ಜಾಗಕ್ಕೆ ಅದೇ ಸ್ಥಳಕ್ಕೆ ರೀ ಇನ್‌ಸ್ಟೇಟ್ ಮಾಡಬೇಕೆಂದು ಹೇಳಿ ಬಹಳ ತರಾತುರಿಯಲ್ಲಿ ಹೋದಮೇಲೆ 1 ಕೋಟಿ 10 ಲಕ್ಷ ರೂಪಾಯಿ ದುರುಪಯೋಗ ಮಾಡಿದ. ರೀಇನ್ಸ್ ಸ್ಟೇಟ್ ಆಯಿತು. ಆತ ರೀಇನ್‌ಸ್ಟೇಟ್ ಆದ ಒಂದೇ ತಿಂಗಳಿನಲ್ಲಿ 3 ಕೋಟಿ 90 ಲಕ್ಷ ರೂಪಾಯಿ ದುರುಪಯೋಗ ಮಾಡಿದ. ಒಟ್ಟು 5 ಕೋಟಿ ರೂಪಾಯಿ ದುರುಪಯೋಗವಾಯಿತು. ಇದು ನಡೆದಿರತಕ್ಕದ್ದು ನಾರಾಯಣಪುರ ತೋಟಗಾರಿಕೆ ಕ್ಷೇತ್ರದಲ್ಲಿ. ಮುಖ್ಯಮಂತ್ರಿಗಳ ಕಛೇರಿಯಿಂದ ರೀಇನ್‌ಸ್ಟೇಟ್ ಮಾಡಬೇಕೆಂದು ಪತ್ರ ಬಂತು. ನನ್ನ ತಿಳುವಳಿಕೆಗೆ ಬಂದ ರೀತಿಯಲ್ಲಿ ಅದು ಫೋರ್ಜರಿ ಪತ್ರ. ಇವರು ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಯಾರೋ ಆಫೀಸಿನಲ್ಲಿ ಮಾಡಿದ್ದಾರೆ. ಫೋರ್ಜರಿ ಪತ್ರದ ಆಧಾರದ ಮೇಲೆ ಯಾರು ಸಸ್ಪೆಂಡ್ ಆದ ವ್ಯಕ್ತಿಯನ್ನು ಒಂದೂವರೆ ತಿಂಗಳಿನ ಅವಧಿಯಲ್ಲಿಯೇ 1 ಕೋಟಿ 10 ಲಕ್ಷ ರೂಪಾಯಿ ದುರುಪಯೋಗ ಮಾಡಿದ. ಆತನನ್ನು ಅದೇ ಜಾಗಕ್ಕೆ ಅದೇ ಸ್ಥಳಕ್ಕೆ ರೀಇನ್‌ಸ್ಟೇಟ್ ಮಾಡಿದರು. ಇವತ್ತು ಸರ್ಕಾರ ಅದಕ್ಕೆ ಸಂಬಂಧಪಟ್ಟ ಕಡತವನ್ನು ಸದನದ ಮುಂದೆ ಮಂಡಿಸಬೇಕು. ಸತ್ಯಾಂಶ ರಾಜ್ಯದ ಜನತೆಗೆ ಗೊತ್ತಾಗಲಿ. ನಿಮಗೆ ಆ ಪೊಲಿಟಿಕಲ್ ವಿಲ್ ಇದ್ದರೆ

ಆವೊಂದು ಕಡತವನ್ನು ಸದನದ ಮುಂದೆ ಇಡಿ. ಇದರಲ್ಲಿ ಯಾರ್ಯಾರ ಕೈವಾಡ ಇದೆ ಗೊತ್ತಾಗುತ್ತದೆ. ಅದಕ್ಕೆ ನೀವೂ ಕೂಡ ಸರ್ಕಾರ ಕೂಡ ಶಾಮೀಲಾಗಿದೆ ಎನ್ನತಕ್ಕ ಮಾತನ್ನು ಹೇಳಿದೆ. ತಮಗೆ ಗೊತ್ತಿದೆ ನಾವು 5-10 ಸಾವಿರ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಬೇಡುತ್ತೇವೆ. ಇಲ್ಲಿ 5 ಕೋಟಿ ರೂಪಾಯಿ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಯಾರಪ್ಪನ ಮನೆ ದುಡ್ಡು? ನಾವು ಕತೆ ಕೇಳಿಕೊಂಡು ಹೋಗಲಿಕ್ಕೆ ಬಂದಿದ್ದೇವೆಯೆ?

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ಸರ್ಕಾರ ಲೂಟಿ ಮಾಡಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಯಾರೋ ಅಧಿಕಾರಿಗಳು ಮಾಡಿದ ತಪ್ಪಿಗೆ 'ಕೋತಿ ಮೊಸರು ತಿಂದು ಮೇಕೆ ಬಾಯಿಗೆ ಒರೆಸಿತು' ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಯೆಂದು ಹೇಳಲಿ. ಸರ್ಕಾರ ಶಾಮೀಲಾಗಿದೆ ಎನ್ನುವ ಪದ ಏನು ಉಪಯೇಗ ಮಾಡಿದ್ದಾರೆ ಆ ಪದವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಸರ್ಕಾರ ಶಾಮೀಲಾಗಿದೆ.

ಶ್ರೀ ಡಿ.ಟಿ.ಜಯಕುಮಾರ್: ಸರ್ಕಾರ ಶಾಮೀಲಾಗಿದೆ, ಜಯಕುಮಾರ್ ಶಾಮೀಲಾಗಿದೆ ಅಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ನಾವು ಜಯಕುಮಾರ್ ಎಂದು ಹೇಳಲಿಲ್ಲ. ಅವರೇ ಹೇಳಿಕೊಳ್ಳುತ್ತಿದ್ದಾರೆ. ಅವರು ಹಾಗೆ ಹೇಳಲಿಲ್ಲ.

ಉಪಾಧ್ಯಕ್ಷರು: ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಾವು ಕೂಡ್ರಿ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ರಾಮಸ್ವಾಮಿಯವರು ನೇರವಾಗಿ ಜಯಕುಮಾರ್ ಎಂದು ಹೇಳಲಿಲ್ಲ. ಅವರು ಉತ್ತರ ಕೊಡುವಾಗ ನಾನು ಶಾಮೀಲಾಗಿಲ್ಲವೆಂದು ಹೇಳಲಿ. ನನಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳಲಿಕ್ಕೆ ನಿಮಗೆ ಅಧಿಕಾರವಿದೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿ. ಅದಕ್ಕೆ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ವಾಟಾಳ್‌ನಾಗರಾಜ್: ಜಯಕುಮಾರ್ ಎಂದು ಅವರು ಹೇಳಲಿಲ್ಲ. ಸರ್ಕಾರ ಅಂದರೆ ಜಯಕುಮಾರ್ ಅಂತಲೇ? ಸರ್ಕಾರ ಅಂದರೆ ಎಲ್ಲರೂ ಅದಕ್ಕೆ ರೆಸ್ಪಾನ್ಸಿಬಿಲಿಟಿ.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಹೇಳಿದ ಮಾತನ್ನು ಮತ್ತೊಮ್ಮೆ ಪುನರುಚ್ಚಾರ ಮಾಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಸಗೀರ್‌ಅಹ್ಮದ್‌ರವರೇ, ಕೂಡಿ, ಎಂದು ನಿಮ್ಮ ಕುರ್ಚಿಗೆ ಹೇಳಬೇಕಾ? ಕೊಡ್ರಿ ಅಂದರೆ ನಿಮಗೆ ಹೇಳಬೇಕಾ? ಏಕೆ ನಿಮಗೆ ಸುಮ್ಮನೆ ಕುರ್ಚಿಯಲ್ಲಿ ಕೂಡಲಿಕ್ಕೆ ಆಗುವುದಿಲ್ಲವೇ? ಆ ಮಾತನ್ನು ಮತ್ತೊಮ್ಮೆ ನಾನು ಪುನರುಚ್ಚಾರ ಮಾಡುತ್ತಿದ್ದೇನೆ. ಈ ಸರ್ಕಾರ ಈ ವಿಷಯದಲ್ಲಿ ಶಾಮೀಲಾಗಿ ಹಣ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದು ನಾನು ನನ್ನಲ್ಲಿರತಕ್ಕಂಥ ದಾಖಲೆಗಳು, ಪುರಾವೆಗಳ ಮೂಲಕ ಹೇಳುತ್ತಿದ್ದೇನೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ, ಸಿ.ಎಂ.ಆಫೀಸಿನಿಂದ ಇವರನ್ನು ರಿಇನ್‌ಸ್ಟೇಟ್ ಮಾಡುವುದಕ್ಕೆ ಆದೇಶ ಕೊಟ್ಟವರು ಯಾರು? ಹೇಗೆ ಕೊಟ್ಟರು?

ಉಪಾಧ್ಯಕ್ಷರು: ರಾಮಸ್ವಾಮಿಯವರೇ, ನೀವು ಆ ಕಡೆಗೆ ಏಕೆ ನೋಡುತ್ತೀರಿ? ಚೇರ್ ಕಡೆಗೆ ನೋಡಿ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಮುಖ ನೋಡಿದರೆ ನಮಗೆ ಏನಾಗುತ್ತದೆ ಸ್ವಾಮಿ? ಕೋಪಾನೇ ಬರುವುದಿಲ್ಲ.

ಉಪಾಧ್ಯಕ್ಷರು: ಮತ್ತೆ ಯಾರ ಮುಖ ನೋಡಬೇಕು?

ಶ್ರೀ ವಾಟಾಳ್ ನಾಗರಾಜ್: ಸರ್ಕಾರದ ಮುಖ ನೋಡಿದರೆ ಕೋಪ ಬರುತ್ತದೆ ಕೆಲವು ಮಂತ್ರಿಗಳ ಮುಖ ನೋಡಿದರೆ ಕೋಪ ಬರುತ್ತದೆ.

ಉಪಾಧ್ಯಕ್ಷರು: ನಿಗದಿತ ಸಮಯದೊಳಗೆ ತಾವು ಮುಗಿಸಬೇಕಾಗುತ್ತದೆ. ಹೇಳಿದ್ದನ್ನೇ ಹೇಳಬೇಡಿ, ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಯಾರು ಈ ಒಂದು ವ್ಯಕ್ತಿಯನ್ನು ಅದೇ ಸ್ಥಳಕ್ಕೆ ರಿಇನ್‌ಸ್ಟೇಟ್ ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ? ಆ ಕಡತವನ್ನು ದಯಮಾಡಿ ಸದನದ ಮುಂದೆ ಮಂಡಿಸಬೇಕು. ಸತ್ಯಾಂಶ ನಮಗೆ ಗೊತ್ತಾಗಬೇಕು, ರಾಜ್ಯದ ಜನರಿಗೆ ಗೊತ್ತಾಗಬೇಕು. ಅದನ್ನು ಮಂಡಿಸಲಿಕ್ಕೆ ತಾವು ದಯಮಾಡಿ ಹೇಳಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಮೂರು ವರ್ಷಗಳ ಹಿಂದೆ ಹೀಗೆಯೇ ಕುದುರೆಮುಖದಲ್ಲಿ ಒಬ್ಬ ಎಸ್.ಎ.ಡಿ.ಹೆಚ್. ಸಸ್ಪೆಂಡ್ ಆದರು. ಅವರೂ ಕೂಡ ಎರಡು ಲಕ್ಷ ರೂಪಾಯಿಗಳನ್ನು ದುರುಪಯೋಗ ಮಾಡಿದ್ದರು. ಇವತ್ತಿನವರೆಗೂ ಅವರು ರಿಇನ್‌ಸ್ಟೇಟ್ ಆಗಿಲ್ಲ. ಅಲ್ಲಿ ಏಕೆ ನಿಮ್ಮ ಸರ್ಕಾರ ಕೆಲಸ ಮಾಡಿಲ್ಲ? ಇಲ್ಲಿ ಏಕೆ ಬೇರೆ ತರಹ ಆಯಿತು? ಇಲ್ಲಿ ಒಂದು ನೀತಿಯ

ಅಳತೆಗೋಲು, ಅಲ್ಲಿ ಒಂದು ನೀತಿಯ ಅಳತೆಗೋಲು. ಇದು ಏಕೆ ಎನ್ನತಕ್ಕಂಥಾದ್ದನ್ನು ತಾವು ದಯಮಾಡಿ ತಿಳಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಇಷ್ಟಾದಮೇಲೆ ಎ.ಜಿ.ಆಫೀಸ್‌ನವರೂ ಕೂಡ ರೆಫರ್ ಮಾಡಿದ್ದಾರೆ 5 ಕೋಟಿ ಹಣ ತಾಳೆಯಾಗುತ್ತಿಲ್ಲ, ಇದು ಮಿಸ್ ಆಪ್ರಾಪ್ರಿಯೇಷನ್ ಆಗಿದೆ ಎಂದು ಹೇಳಿ. ಆಮೇಲೆ ಸರ್ಕಾರ ಜುಲೈ 97ರಲ್ಲಿ ಲೋಕಾಯುಕ್ತಕ್ಕೆ ಇದನ್ನು ರೆಫರ್ ಮಾಡಿದ್ದು. ಲೋಕಾಯಕ್ತಕ್ಕೆ ರೆಫರ್ ಮಾಡಿದಮೇಲೆ ಅಲ್ಲಿ ರೈಡ್ ಮಾಡಿದರು. ಯಾರು ಇದಕ್ಕೆ ಬಹಳ ಮುಖ್ಯ ಕಾರಣನಾಗಿದ್ದ ಆತನನ್ನು ಅರೆಸ್ಟ್ ಮಾಡಲಿಲ್ಲ, ಜೈಲಿಗೆ ಹಾಕಲಿಲ್ಲ. ಬೇರೆಯವರನ್ನು ಅರೆಸ್ಟ್ ಮಾಡಿದರು ಮತ್ತು ಜೈಲಿಗೆ ಹಾಕಿದರು. ಆತನು ತಪ್ಪಿಸಿಕೊಂಡು ರಾಜಾರೋಷವಾಗಿ 15 ದಿವಸ ತನಕ ತಿರುಗಿದ, ನಂತರ ಬೇಲ್ ತೆಗೆದುಕೊಂಡು ಬಂದ. ಅವನನ್ನು ನೀವು ಜೈಲಿಗೆ ಹಾಕಲಿಲ್ಲ. ಈಗ ಆ ಐದು ಕೋಟಿ ಯಾವರೀತಿ ಯಾರ ಜೇಬಿಗೆ ಸೇರಿಕೊಂಡಿತು? ಎಲ್ಲಿಂದ ಶುರುವಾಯಿತು ಈ ಹಗರಣ? ಯಾರ್‍ಯಾರ ಜೇಬಿಗೆ ಎಷ್ಟೆಷ್ಟು ಹೋಯಿತು ಎನ್ನತಕ್ಕಂಥ ವಿವರಗಳನ್ನು ತಾವು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಗಳ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದಾದಮೇಲೆ ಮತ್ತೊಂದು ಬಹಳ ಗಂಭೀರವಾದ ಒಂದು ಘಟನೆ ಈ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ನಡೆಯಿತು. ಫೆಬ್ರವರಿಯಲ್ಲಿ ಅವನು ರೀಇನಿಸ್ಟೇಟ್ ಆದಮೇಲೆ ಏಳು ಜನರು ಅಲ್ಲಿಂದ ನಾರಾಯಣಪುರದಿಂದ ಬೆಂಗಳೂರಿಗೆ ಬರುತ್ತಾರೆ. ನಾಲ್ಕು ಜನ ವೈಭವ ಲಾಡ್ಜ್‌ನಲ್ಲಿ ಉಳಿದುಕೊಳ್ಳುತ್ತಾರೆ, ಯಾರು ಈ ಇನ್‌ಚಾರ್ಜ್ ಅಸಿಸ್ಟೆಂಟ್ ಡೈರೆಕ್ಟರ್ ಫಾರ್ ಹಾರ್ಟಿಕಲ್ಚರ್ ಮತ್ತು ನಾಲ್ಕು ಜನರು. ಇನ್ನು ಮೂರು ಜನರಲ್ಲಿ ಒಬ್ಬ ಮಲ್ಲಣ್ಣ ಅಂತ ಆತ ಗಾರ್ಡನರ್, ತೋಟಗಾರ. ಅವನು ರಾಯಲ್ ಲಾಡ್ಜ್‌ನಲ್ಲಿ ಉಳಿದುಕೊಳ್ಳುತ್ತಾನೆ. ಅಲ್ಲಿ ಉಳಿದುಕೊಂಡಮೇಲೆ ಆತನೇ ಈ ಎಲ್ಲಾ ಬಿಲ್‌ಗಳನ್ನು ತಯಾರು ಮಾಡಿದಂಥವನು. ಕೈಯಲ್ಲಿ ಬರವಣಿಗೆಯಲ್ಲಿ ಬರೆದಂಥವನು. ಇವನು ರಿಇನ್‌ಸ್ಟೇಟ್ ಮಾಡಿಕೊಂಡು ಹೋಗಬೇಕು ಎನ್ನತಕ್ಕಂಥ ಉದ್ದೇಶದಿಂದ ಬಿಲ್ಲುಗಳನ್ನು ತಯಾರು ಮಾಡಿಸಿಕೊಂಡಿದ್ದ. ಹೋದತಕ್ಷಣ ಮಾರ್ಚ್ ತಿಂಗಳಲ್ಲಿ ಅಮೌಂಟ್‌ನ್ನು ವಿತ್‌ಡ್ರಾ ಮಾಡಿದ. ಆದರೆ ಯಾರು ಬರವಣಿಗೆಯಲ್ಲಿ ಬರೆದಿದ್ದ, ಅವನನ್ನು ಮುಗಿಸಬೇಕು ಎಂದು ಹೇಳಿ ರಾಯಲ್ ಲಾಡ್ಜ್‌ನಲ್ಲಿ ಅವನಿಗೆ ಹೊಡೆದು ಮಾರಣಾಂತಿಕ ಪೆಟ್ಟು ಕೊಟ್ಟರು. ಲಾಡ್ಜ್‌ನವರು ಏಕೆ ಅವನನ್ನು ಹೊಡೆಯುತ್ತಿದ್ದೀರಿ, ನಾವು ಪೋಲೀಸ್ ಕಂಪ್ಲೇಂಟ್ ಕೊಡುತ್ತೇವೆ ಎಂದು ಹೇಳಿದಾಗ ಆಗ ಅವನನ್ನು ನಿಮಾನ್ಸ್ ಆಸ್ಪತ್ರೆಗೆ ಸಾಗಣೆ ಮಾಡುತ್ತಾರೆ. ನಿಮಾನ್ಸ್ ಆಸ್ಪತ್ರೆಯವರು ಪೋಲೀಸರಿಗೆ ಕಂಪ್ಲೇಂಟ್ ಕೊಡುತ್ತಾರೆ. ಅದು ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆಗುತ್ತದೆ. ಕೇಸ್ ರಿಜಿಸ್ಟರ್ ಆದಮೇಲೆ ಅವರಿಗೂ ಜೇಬಿಗೆ ಸೇರಿತು. ನನ್ನ ಪ್ರಕಾರ ಹತ್ತುಲಕ್ಷ ಅಲ್ಲಿಗೂ ಕೂಡ ಸೇರಿತು ಎಂದು ಹೇಳುತ್ತೇನೆ. ರಿಇನ್‌ಸ್ಟೇಟ್ ಮಾಡಿಸಲಿಕ್ಕೆ 25 ಲಕ್ಷ ಹೋಯಿತು. ಏಕೆಂದರೆ ಐದು

ಕೋಟಿ ಹೊಡಿತಿದ್ದಾನಲ್ಲಾ, ಯಾರಪ್ಪನ ಮನೆ ದುಡ್ಡು? ನಾನು ಹೇಳುತ್ತೇನೆ ಇವರು ಆಧುನಿಕ ಯಮರು. ಹಿಂದಿನ ಕಾಲದಲ್ಲಿ ಆಯುಷ್ಯ ಮುಗಿದಮೇಲೆ ಯಮ ಪ್ರಾಣ ತೆಗೆದುಕೊಂಡುಹೋದ ಎಂದು ನಾವು ಎಲ್ಲರೂ ಕೇಳಿದ್ದೇವೆ. ಈ ಆಧುನಿಕ ಯಮರು, ಪಾಪ ಅವನ ಆಯುಷ್ಯ ಇನ್ನೂ ಮುಗಿದಿಲ್ಲ. ಆದರೂ ಹಣವನ್ನೂ ತೆಗೆದುಕೊಂಡರು, ಅವನ ಹೆಣವನ್ನೂ ಉರುಳಿಸಿದರು. ಹಣ ಮತ್ತು ಪ್ರಾಣ ಎರಡನ್ನೂ ತೆಗೆದುಕೊಂಡುಹೋದರು. ಇದರ ಬಗ್ಗೆ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆದರೂ ಕೂಡ ಇವತ್ತಿನವರೆಗೂ ತನಿಖೆ ಮುಂದುವರೆದಿಲ್ಲ. ಕೇಸ್‌ನ್ನು ಹಾಗೆಯೇ ಮುಚ್ಚಿಹಾಕಿದರು. ಇದು ಗಂಭೀರವಾದ ವಿಷಯ ಅಲ್ಲವೇನು? ಸಿ.ಎ.ಜಿ.ಆಫೀಸಿನವರು ಅವತ್ತು ಬಂದು ಎಲ್ಲಾ ತನಿಖೆ ಮಾಡುವುದಕ್ಕೆ ಬಹುಮುಖ್ಯವಾಗಿ ಕಾರಣ ಗುಲ್ಬರ್ಗಾದ ಜಾಯಿಂಟ್ ಡೈರೆಕ್ಟರ್ ಅವರು ಸಿ.ಎ.ಜಿ.ಗೆ ಪತ್ರ ಬರೆದರು. ನಾನು ನಿರಪರಾಧಿ, ನನಗೆ ಶಿಕ್ಷೆ ಕೊಟ್ಟರು, ಜೈಲಿಗೆ ಹಾಕಿದ್ದಾರೆ, ಅಪರಾಧಿಗಳನ್ನು ಬಿಟ್ಟು ಬಿಟ್ಟಿದ್ದಾರೆ, ನೀವು ಬಂದು ತನಿಖೆ ಮಾಡಬೇಕು ಎಂದು ಹೇಳಿದಾಗ ಅವರು ಎ.ಜಿ.ಆಫೀಸ್‌ಗೆ ಬರೆದು ಅವರು ಬಂದು ಸವಿವರವಾಗಿ ತನಿಖೆ ಮಾಡಿ ಇಷ್ಟೆಲ್ಲಾ ವಿಷಯಗಳು ಹೊರಬರುವುದಕ್ಕೆ ಕಾರಣವಾಗಿದೆ. ನಂತರ ಲೋಕಾಯುಕ್ತಕ್ಕೆ ರೆಫರ್ ಆಗಿದೆ. ಇವರು ಏನು ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಯಾರು ದುಡ್ಡು ಹೊಡೆಯುತ್ತಿದ್ದಾರೆ, ಆ ದುಡ್ಡು ಹೊಡೆಯುವವರಿಗೆ ದುಡ್ಡು ಹೊಡೆಯದಿರುವವರು ಇವತ್ತು ಲೆಕ್ಕ ಕೊಡಬೇಕು. ಅವನು ಯಾರನ್ನು ತನಿಖೆಗೆ ಎಂದು ನೇಮಕ ಮಾಡಿದರು ಅವನಿಗೊಂದು ಮಾರುತಿಕಾರು. ಅವನು ಇವತ್ತಿನವರೆಗೂ ತನಿಖೆಯನ್ನು ಮುಂದುವರೆಸುತ್ತಿಲ್ಲ. ಅದು ಐದುನೂರಲ್ಲ, ಐದು ಸಾವಿರ ಅಲ್ಲ, ಐದುಕೋಟಿ ರೂಪಾಯಿ. ಈ ಹಣ ಎಲ್ಲಿ ಹೋಯಿತು ಎಂಬುದನ್ನು ಇನ್ನೂ ಕೂಡ ಪತ್ತೆ ಮಾಡಿಲ್ಲ. ಕಾರ್ಯದರ್ಶಿಯಿಂದ ಹಿಡಿದು ಮೂರನೆ ಮಹಡಿಯಿಂದ ಹಿಡಿದು, ಪೊಲೀಸ್ ಸ್ಟೇಷನ್‌ವರೆಗೆ ಇಲ್ಲಿ ಹಣದ ಹೊಳೆ ಹರಿದಿದೆ. ಅವನೇನು ಐದು ಕೋಟಿ ಸರ್ಕಾರದ ಹಣವನ್ನು ಲೂಟಿ ಮಾಡಿದ, ಅದರಲ್ಲಿ ಬಹುತೇಕ ಅರ್ಧಭಾಗದ ಹಣವನ್ನು... ಒಂದು ದಿವಸ ನಾನು ಹೇಳಿದ್ದೆ, ಹಗರಣಗಳ ಮೂಲಕ ಕೆಲವರು ದುಡ್ಡು ಮಾಡುತ್ತಾರೆ. ಮತ್ತೆ ದುಡ್ಡು ಕೊಟ್ಟೇ ಹಗರಣಗಳನ್ನು ಮುಚ್ಚಿಹಾಕಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಹೇಳಿ. ಅದೇ ಕೃತ್ಯ ಈ ಒಂದು ಘಟನೆಯಲ್ಲಿ ಕೂಡ ನಡೆದಿದೆ. ನೀವೇ ಹೇಳಿ, ಈ ಘಟನೆ ಏನು ನಡೆದಿದೆ, ಇದು ಈ ರಾಜ್ಯಕ್ಕೆ ಸರ್ಕಾರಕ್ಕೆ ಸಮಾಧಾನ ತರತಕ್ಕಂಥ ವಿಷಯವಾ? ಇದಕ್ಕೆ ನಾವು ನೈತಿಕ ಜವಾಬ್ದಾರಿಯನ್ನು ಹೊರಬಾರದೇ ಎನ್ನತಕ್ಕಂಥ ಮಾತನ್ನು ಹೇಳಿ ಇದು ಇಲಾಖೆಯ 96ರ ನವೆಂಬರ್-ಡಿಸೆಂಬರ್‌ನದ್ದು ಏನಿದೆ, ನನ್ನ ಹತ್ತಿರ ಕೂಡ ಇದರ ಬಗಗೆ ಪತ್ರ ಇದೆ. 27.11.96ರಲ್ಲಿ ಡೈರೆಕ್ಟರ್ ಅವರ ಕಚೇರಿಯಿಂದ ಪತ್ರ ಬರೆಯುತ್ತಾರೆ, ಹೀಗೆ ದುರುಪಯೋಗವಾಗುತ್ತಿದೆ, ತಾಳೆಯಾಗುತ್ತಿಲ್ಲ ಹೆಚ್ಚು ಹಣ ಡ್ರಾ ಮಾಡುತ್ತಿದ್ದಾರೆ ಎಂದು ಹೇಳಿ. ಇದರಲ್ಲಿ ಅನಾವಶ್ಯಕವಾಗಿ ತೋಟಗಾರಿಕೆ

ಇಲಾಖೆಯವರು ಹಣ ಡ್ರಾ ಮಾಡಿದ್ದಾರೆ. ಇದರಲ್ಲಿ ಟ್ರೆಜರಿಯವರೂ ಸಹ ಶಾಮಿಲಾಗಿದ್ದಾರೆ. ಒಂದೇ ತಿಂಗಳಲ್ಲಿ ಮೂರು ಕೋಟಿರೂ.ಗಳ ಹಣ ಡ್ರಾಮಾಡುತ್ತಾರೆ ಎಂದರೆ ಟ್ರೆಜರಿಯವರೂ ಸಹ ಇದರಲ್ಲಿ ಶಾಮಿಲಾಗಿದ್ದಾರೆ. ಹುಣಸಗಿ ಟ್ರೆಜರಿಯವರು ಮತ್ತು ಅಲ್ಲಿ ಸಂಬಂಧಪಟ್ಟಂಥ ಬ್ಯಾಂಕಿನವರು ಕೂಡ ಇದರಲ್ಲಿ ಶಾಮಿಲಾಗಿದ್ದಾರೆ. ಆಡಿಟ್ ಪಾರ್ಟಿಯವರು ಗೊತ್ತಿದ್ದೂ ಕೂಡ ರಿಪೋರ್ಟ್ ಸಬ್‌ಮಿಟ್ ಮಾಡದೇನೇ ದುಡ್ಡು ತೆಗೆದುಕೊಂಡು ಸುಮ್ಮನೆ ರಿಪೋರ್ಟನ್ನು ಮುಚ್ಚಿ ಹಾಕಿದ್ದಾರೆ. ಡೈರೆಕ್ಟರೇಟ್ ಆಫೀಸ್‌ನವರು ಪ್ರಾವಿಷನ್ ಇಲ್ಲದಿದ್ದರೂ ಕೂಡ ಒಬ್ಬ ಹಾರ್ಟಿಕಲ್ಚರ್ ಅಸಿಸ್ಟೆಂಟ್‌ನನ್ನು ಪ್ರಭಾರಿ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ ಆಗಿ ನೇಮಕ ಮಾಡಿದ್ದಾರೆ. ಇಲ್ಲಿ ಮೂರನೇ ಮಹಡಿಯಿಂದ ಒಂದು ಕೋಟಿ ಹತ್ತು ಲಕ್ಷ ತಿಂದವನನ್ನು ಮತ್ತೆ ಅದೇ ಜಾಗಕ್ಕೆ ರಿಇನ್‌ಸ್ಟೇಟ್ ಮಾಡಿ ಎಂಬ ಆದೇಶ ಹೋಗುತ್ತದೆ. ಇದೆಲ್ಲದರ ನೈತಿಕ ಹೊಣೆ ಹೊತ್ತು ಕನಿಷ್ಟ ಪೊಲೀಸ್ ಇಲಾಖೆಯಿಂದ ಬಂದಿರತಕ್ಕಂಥ ನೀವಾದರೂ ರಾಜೀನಾಮೆಯನ್ನು ಕೊಡಬಾರದಾ? ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಬಾರದಾ? ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ರಾಜ್ಯಸರ್ಕಾರದ ಒಂದು ಹೈಯೆಸ್ಟ್ ಅಥಾರಿಟಿ ಇನ್ವಾಲ್ವ್ ಆಗಿದೆ. ಇದನ್ನು ಇಲ್ಲಿಯೇ ತನಿಖೆ ಮಾಡಿದರೆ ಸತ್ಯ ಹೊರಬೀಳುವುದಿಲ್ಲ. ಸಿ.ಓ.ಡಿ.ಯಿಂದ ತನಿಖೆ ಮಾಡಿಸಿದರೆ ಸಿ.ಎಂ.ಆಫೀಸಿನ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ ತನಿಖೆಮಾಡುವುದಕ್ಕೆ ಆಗುತ್ತದೆಯೆ? ಇವರ ಅಧೀನದಲ್ಲಿರತಕ್ಕಂಥ ಸಂಸ್ಥೆಗಳು ಮೇಲ್ಮಟ್ಟವರ ಮೇಲೆ ತನಿಖೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ? ಇದನ್ನು ದಯವಿಟ್ಟು ತಾವು ಸಿ.ಬಿ.ಐ. ತನಿಖೆಗೆ ವಹಿಸಬೇಕು. ಸತ್ಯಾಂಶವನ್ನು ಹೊರತರುವ ದೃಷ್ಟಿಯಿಂದ ಇದನ್ನು ಮಾಡಬೇಕು. ಒಂದು ಒಳ್ಳೆಯ ಸಂದೇಶ ಇಲಾಖೆಗಳಿಗೆ ಹೋಗಬೇಕು. ಅಧಿಕಾರಿವರ್ಗದವರು ಭಯಭೀತರಾಗಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ನೀವು ಮಾಡಿಕೊಡಬೇಕು. ಆ ದಿಕ್ಕಿನಲ್ಲಿ ದಯಮಾಡಿ ಸಿ.ಬಿ.ಐ. ತನಿಖೆಗೆ ತಾವು ಆದೇಶ ಮಾಡಬೇಕೆಂದು ಒತ್ತಾಯವನ್ನು ಬಹಳ ಪ್ರಭಲವಾಗಿ ಮಾಡುತ್ತಾ, ದಯಮಾಡಿ ಇದರಲ್ಲಿ ತಾವು ವಹಿಸಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಆತ್ಮಶೋಧನೆಯನ್ನು ಮಾಡಿಕೊಳ್ಳಿ. ಇದರಲ್ಲಿ ಎಡವಿದ್ದೀರಿ. ನೀವು ಇದ್ದೀರೋ ಅಥವಾ ನಿಮ್ಮ ಸಂಸ್ಥೆ, ಅಥವಾ ನಿಮ್ಮ ಸರ್ಕಾರ ಇದರಲ್ಲಿ ನೇರವಾಗಿ ಪಾಲುದಾರರಾಗಿರುವ ಹೊತ್ತಿಗೇನೆ ಇದು ಆಗಲಿಕ್ಕೆ ಕಾರಣವಾಯಿತು. ನಿಮ್ಮ ಸಿ.ಎ.ಜಿ. ರಿಪೋರ್ಟನಲ್ಲಿ ಕೂಡ ಹೇಳಿದ್ದಾರೆ. ಇಷ್ಟರಮಟ್ಟಿಗೆ ಇದು ಜಾಸ್ತಿ ಆಗಬೇಕಾಗಿದ್ದರೆ, ಮೊದಲೇ ಕ್ರಮ ತೆಗೆದುಕೊಂಡಿದ್ದರೆ ಇದು ಆಗುತ್ತಿರಲಿಲ್ಲ ಎಂಬ ಮಾತನ್ನು ಕೂಡ ವರದಿಯಲ್ಲಿ ಅವರು ಹೇಳಿದ್ದಾರೆ. ಇದರಲ್ಲಿ ಸರ್ಕಾರದ ಲೋಪದೋಷ ನೇರವಾಗಿ ಇದೆ. ಆದರ ನೈತಿಕ ಹೊಣೆ ಹೊತ್ತು ತಾವು ರಾಜೀನಾಮೆ ಕೊಡಿ. ಈ ಒಂದು ಘಟನೆಯ ಬಗ್ಗೆ ತಾವು ಸಿ.ಬಿ.ಐ ತನಿಖೆಗೆ ಆದೇಶ ಮಾಡಬೇಕೆಂದು ವಿನಂತಿಯನ್ನು ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಅತ್ಯಂತ ವಿನಮ್ರವಾಗಿ, ಕಳಕಳಿಯಿಂದ ಒತ್ತಾಯ

ಪೂರ್ವಕವಾಗಿ ಮನವಿ ಮಾಡುತ್ತೇನೆ.

+ ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯರಾಮಸ್ವಾಮಿಯವರು ಒಂದು ಗಂಭೀರವಾದಂಥ ವಿಚಾರವನ್ನು ಈ ಸದನದ ಮುಂದೆ ತಂದಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಮೇಲ್ಮನೆಯಲ್ಲಿ ಚುಕ್ಕೆ ಗುರುತಿನ ಪ್ರಶ್ನೆಗೆ ಡಾ॥ತಂಗಾರವರ ಪ್ರಶ್ನೆಗೆ ಉತ್ತರವನ್ನು ಕೂಡ ಕೊಡಲಾಗಿದೆ. ಇಲ್ಲಿಯೂ ಕೂಡ ತೋಟಗಾರಿಕಾ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರಾದ ಮಾನ್ಯ ಸಭಾಪತಿಯವರೂ ಕೂಡ ಈ ವಿಚಾರವನ್ನು ಚರ್ಚೆ ಮಾಡಿದ್ದಾರೆ. ಆ ಸಂದರ್ಭದಲ್ಲೂ ಕೂಡ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮತ್ತು ಯಾವರೀತಿ ಈ ಘಟನೆಯಾಯಿತು ಎನ್ನುವ ವಿಚಾರವನ್ನು ಮನವರಿಕೆ ಮಾಡಿದ್ದೇನೆ. ಆದರೂ ಕೂಡ ಮಾನ್ಯ ರಾಮಸ್ವಾಮಿಯವರು ಇವತ್ತು ಏನುತಂದಿದ್ದಾರೆ, ಜೊತೆಗೆ ನಮಗೆ ಅನುಕೂಲವಾಗುವ ರೀತಿಯಲ್ಲಿ ಇನ್ನೊಂದು ಹೊಸ ವಿಚಾರವನ್ನೂ ಕೂಡ ಹೇಳಿದ್ದಾರೆ. ಇದುವರೆಗೂ ಕೂಡ ಸರ್ಕಾರಕ್ಕೆ ಆ ಮಲ್ಲಣ್ಣನ ಕೊಲೆಯ ಬಗ್ಗೆ ಗೊತ್ತಿರಲಿಲ್ಲ. ಆದರೆ, ಈ ತನಿಖೆಯ ಅವಧಿಯಲ್ಲಿ ಆದೇನಾದರೂ ಆಗಿದ್ದರೆ, ಅದರ ಮೇಲೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಯಾವುದೇ ರೀತಿಯಲ್ಲಿ ಹಿಂಜರಿಯುವುದಿಲ್ಲವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಈ ಒಂದು ಘಟನೆ ಬಗ್ಗೆ ಸರ್ಕಾರ ನೈತಿಕ ಹೊಣೆ ಹೊರಬೇಕೆಂದು ಹೇಳಿದ್ದಾರೆ. ಮಾನ್ಯ ರಾಮಸ್ವಾಮಿಯವರೇ, ತಾವೂ ಕೂಡ ಸರ್ಕಾರ ನಡೆಸುವುದರಲ್ಲಿ ಪಾಲುದಾರರಾಗಿದ್ದಿರಿ. ಈ ವ್ಯವಸ್ಥೆ ಹೇಗಿದೆ ಎಂದರೆ, ಈ ವ್ಯವಸ್ಥೆಯಲ್ಲಿ ನಿಮ್ಮ ಗಮನಕ್ಕೇ ಬರುವುದಿಲ್ಲ. ಕೆಲವು ವಿಚಾರಗಳು ಬರಬೇಕು. ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬಾರದು. ಸರ್ಕಾರಕ್ಕಾಗಲೀ, ಮಂತ್ರಿಗಳಿಗಾಗಲೀ ಗಮನಕ್ಕೆ ಬರಬೇಕು. ಆದರೆ, ನಮಗೆ ಬರದ ರೀತಿಯಲ್ಲಿಯೇ ಕೆಲವು ವಿಚಾರಗಳು ಆಗುತ್ತವೆ. ಇಲ್ಲಿ ಇಷ್ಟೊಂದು ಕೋಟಿ ರೂಪಾಯಿಗಳು ಲುಕ್ಸಾನಾಗಬೇಕಾದರೆ, ಇಲ್ಲಿ ನಮ್ಮ ಇಲಾಖೆಗೆ ಆಗಿಲ್ಲ ಆದರೆ ಸರ್ಕಾರಕ್ಕೆ ಆಗಿದೆ. ಇದಕ್ಕಿಂತ ಜಾಸ್ತಿ, ತಾವು ಹೇಳಿದಿರಿ. ನೀವು ಪೋಲೀಸ್ ಅಧಿಕಾರಿಯಾಗಿದ್ದಿರಿ, ಇದನ್ನು ನೀವು ಸರಿಯಾದ ರೀತಿಯಲ್ಲಿ ಮಾಡಬೇಕಾಗಿತ್ತು ಎಂದು. ನಾನು ಪೋಲೀಸ್ ಅಧಿಕಾರಿಯಾದುದರಿಂದಲೇ ಎಲ್ಲೋ ಒಂದು ಪೋಲೀಸ್ ಅಧಿಕಾರಿಯಾಗಿದ್ದಂಥ ಶ್ಲೇಷ ನನ್ನ ಮನಸ್ಸಿನಲ್ಲಿ ಬಂದಿದ್ದರಿಂದ ಇದು ಈಚೆಗೆ ಬರುವುದಕ್ಕೆ ಸಾಧ್ಯವಾಯಿತು. ಬಹುಶಃ ಆ ಪಂಡಿತ್ ಮೂಲ ಎಂದು ತಾವೇನು ರೆಫರ್ ಮಾಡಿದ್ದೀರಿ, ಆ ವ್ಯಕ್ತಿ ಹೆಚ್.ಎ.ಗೆ, ನಾನು ಅಲ್ಲಿಯೇ ಹೇಳಿದೆ. ಈ ಹೆಚ್.ಎ. ಆಗಿದ್ದವನಿಗೆ ನೀವು ಎ.ಎ.ಹೆಚ್.ಓ ಆಗಿ ಅವನಿಗೆ 32 ರೂಲ್ ಪ್ರಕಾರ ಇನ್‌ಚಾರ್ಜ್ ಆಗಿ ಕೊಡಲಿಕ್ಕೆ ಅವಕಾಶ ಇದೆ. ಅವನಿಗೆ ಎ.ಡಿ.ಹೆಚ್. ಆಗಿ ಏಕೆ ಕೊಟ್ಟಿರಿ ಎಂದು ನಾನು, ನಮ್ಮ ಅಧಿಕಾರಿಗಳಿಗೆ ಪ್ರಶ್ನೆ ಮಾಡಿದೆ. ಅವರಿಗೆ ಡಬಲ್ ಚಾರ್ಜ್ ಕೊಟ್ಟಿದ್ದರು. ಡಬಲ್ ಚಾರ್ಜ್ ಕೊಡುವುದಕ್ಕೆ ಬರುವುದಿಲ್ಲ, ಅವನಿಗೆ ಏಕೆ ಕೊಟ್ಟರು ಎಂದು ನನಗೆ

ಅನುಮಾನ ಬಂತು. ಆಗ ಕೂಡಲೇ ಸಂಬಂಧಪಟ್ಟ ಅಧಿಕಾರಿ ಕಳುಹಿಸಿ, ಇನ್‌ಸ್ಪೆಕ್ಷನ್ ಮಾಡಿಸಿ, ಸಸ್ಪೆಂಡ್ ಕೂಡ ನಾನೇ ಇಟ್ಟಿದ್ದೇನೆ. ದಯವಿಟ್ಟು ರೆಕಾರ್ಡ್ಸ್ ತಾವು ನೋಡಬಹುದು. ಸಸ್ಪೆಂಡ್ ಮಾಡಿದ ಮೇಲೆ, ಅವನನ್ನು ರೀ-ಇನ್‌ಸ್ಟೇಟ್ ಮಾಡಬೇಕಾದರೆ, ಅನೇಕ ಒತ್ತಾಯಗಳು ಬಂದವು. ಮಾನ್ಯ ಮುಖ್ಯಮಂತ್ರಿಯವರ ಕಚೇರಿಯಿಂದ ಒಂದು ಪತ್ರ ಬಂದಿದೆ ಎಂದಾದರೆ, ಅದು ಮುಖ್ಯಮಂತ್ರಿಗಳ ಗಮನಕ್ಕೂ ಬಂದಿಲ್ಲವೆಂಬ ವಿಚಾರವೂ ಕೂಡ ನಮ್ಮ ಗಮನಕ್ಕೆ ಬಂದಿದೆ. ಇದು ಎಲ್ಲೋ ಒಂದು ಫೋರ್ಜರಿಯಾಗಿದೆ. ಮುಖ್ಯಮಂತ್ರಿಯವರ ಸಹಿ ಕೂಡ ಫೋರ್ಜರಿ, ಅದು ನಮಗೆ ಗೊತ್ತಾಗುವುದಿಲ್ಲ. ಇದು ಯಾವುದೋ ಒಂದು ಡೇ ಟು ಡೇ ಅಡ್ಮಿನಿಸ್ಟ್ರೇಷನ್‌ನಲ್ಲಿ ಮಾಡತಕ್ಕಂಥ ಕೆಲವರು. ಇಂಥವನು ತಪ್ಪಿತಸ್ಥ ಎಂದರೆ, ಖಂಡಿತ ಅದಕ್ಕೆ ನಾನು ಮಾನ್ಯತೆ ಕೊಡುತ್ತಾ ಇರಲಿಲ್ಲ. ಅವನನ್ನು ಹಿಡಿದು ಹಾಕುತ್ತಿದ್ದವು. ಅದಾದ ಮೇಲೆ, ಇದೇ ಜಾಗ ಬೇಕು ಎಂದು ಅವನು ಒತ್ತಡ ತಂದುದ್ದರಿಂದ, ಆಗ ನನಗೆ ಅನುಮಾನ ಬಂತು. ಇವನು ಇದೇ ಜಾಗ ಕೇಳಬೇಕಾದರೆ, ಏನೋ ತಪ್ಪು ಮಾಡಿದ್ದಾನೆ. ಆದ್ದರಿಂದ ಕೂಡಲೇ ನಮ್ಮ ಅಧಿಕಾರಿಗಳಿಗೆ ಹೇಳಿ, ಇವನು ಇದೇ ಜಾಗ ಬೇಕೆಂದು ಕೇಳಬೇಕಾದರೆ ಏನು? ಮಾನ್ಯ ಮುಖ್ಯಮಂತ್ರಿಯವರ ಕಚೇರಿಯಿಂದ ಈ ರೀತಿಯ ಲೆಟರ್ ಬರಬೇಕಾದರೆ ಕಾರಣ ಏನು? ಆಫ್ಟರ್ ಆಲ್ ಒಬ್ಬ ಹೆಚ್.ಎ.ಇದ್ದವನು, ಮುಖ್ಯಮಂತ್ರಿಯವರಿಂದ ಈ ಪ್ರೆಷರ್ ಬರಬೇಕಾದರೆ, ಇವನೇನೋ ತಪ್ಪು ಮಾಡಿರಲೇಬೇಕೆಂಬ ನಮ್ಮ ಪೋಲೀಸ್ ಬುದ್ಧಿಯನ್ನು ಅಲ್ಲಿ ಅಳವಡಿಸಿದುದ್ದರಿಂದ, ಅವತ್ತು ಇದು ಈಚೆಗೆ ಬಂತು. ಇಂತಹ ಎಷ್ಟೋ ಘಟನೆಗಳು ಆಗುತ್ತವೆ. ಬೇರೆ ಎಲ್ಲಾ ಇಲಾಖೆಯಲ್ಲೂ ಇದಾಗಿರಬಹುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದಂಥ ವಿಚಾರವೆಂದರೆ, ಬೇರೆಯವರನ್ನು ಅನುಮಾನ ಮಾಡತಕ್ಕಂತಾದ್ದು. ಅದರಿಂದ ಇವನು ಸಿಕ್ಕಿ ಹಾಕಿಕೊಂಡ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಪೋಲೀಸ್ ವ್ಯವಸ್ಥೆಯಲ್ಲಿ ಎಲ್ಲರ ಮೇಲೂ ಅನುಮಾನ ಪಡುವುದೇ?

ಶ್ರೀ ಡಿ.ಟಿ.ಜಯಕುಮಾರ್: ಇಲ್ಲ, ಇಲ್ಲ. ಇಂತಹ ಕೃತ್ಯಗಳಾದಾಗ, ಅದರ ಬಗ್ಗೆ ಅನುಮಾನಪಟ್ಟಾಗ, ಆ ಜಾಡನ್ನು ಹಿಡಿದು ನಾವು ಹೋದುದ್ದರಿಂದ ಈ ರೀತಿ ಸಿಕ್ಕಬೇಕಾಯಿತು. ಆಡಿಟ್ ರಿಪೋರ್ಟ್ ಕೂಡ ಇವರಿಗೆ ಫೇವರ್ ಆಗಿ ಮಾಡಿದ್ದಾರೆ. ಅಧಿಕಾರಿಗಳು ಶಾಮೀಲಾಗಿದ್ದಾರೆ. ರಾಜಕಾರಣಿಗಳು ಯಾರು ಆಗಿದ್ದಾರೋ ನನಗೆ ಗೊತ್ತಿಲ್ಲ. ನಾನು ಮಾತ್ರ ಇಷ್ಟು ಹೇಳುತ್ತೇನೆ. ಯಾವುದೇ ಒಂದು ಕೂದಲೆಳೆಯಷ್ಟು ನನ್ನ ಪಾತ್ರ ಇಲ್ಲ. ಇದರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕೆಂದು ನಿಮಗೆಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಕಳಕಳಿಯಿಂದ ನಾನು ಆಗ್ರಹಪಡಿಸಿದ್ದೇನೆ. ನಿಮಗೆ ಗೊತ್ತಿರಬಹುದು, ನಮ್ಮ ಇಡೀ ಸಮಾಜದ ಎಲ್ಲಾ ಅಧ್ಯಕ್ಷರು, ಪದಾಧಿಕಾರಿಗಳು ಎಲ್ಲಾ ಬಂದರು. ಜಾಯಿಂಟ್ ಡೈರೆಕ್ಟರು ಒಳ್ಳೆಯವರು, ಅವನು

ದುಡ್ಡು ತಿಂದಿಲ್ಲ, ಅವನನ್ನು ಸಸ್ಪೆಂಡ್ ಮಾಡಬೇಡಿ ಎಂದು ಹೇಳಿದರು. I am the person who has signed his suspension order. ಆದ್ದರಿಂದ, ಬೇರೆ ಯಾರೇ ನನ್ನ ಸ್ಥಾನದಲ್ಲಿದ್ದರೆ, ಅದನ್ನು ಮುಚ್ಚಿಕೊಳ್ಳುತ್ತಿದ್ದರೇನೋ. ಆದರೆ, ನಾನು ಆ ಮಟ್ಟಕ್ಕೆ ಹೋಗಲಿಲ್ಲ. ಯಾವುದೇ ಬಂಧುಗಳಾಗಿರಲಿ, ಅಣ್ಣ ಆಗಿರಲಿ, ತಮ್ಮ ಆಗಿರಲಿ, ಯಾರೇ ಆಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು, ಹೇಳಿ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದರಿಂದ, ಒಬ್ಬ ಜಾಯಿಂಟ್ ಡೈರಕ್ಟರು, ಅವನದೇನೂ ಜಾಸ್ತಿ ಪಾತ್ರ ಇಲ್ಲದೇ ಇದ್ದರೂ ಕೂಡ ರೀ ಕನ್ಸಿಲೇಷನ್ ಮಾಡಲಿಲ್ಲವೆಂಬ ಒಂದೇ ಒಂದು ಕಾರಣಕ್ಕೋಸ್ಕರ ಒಬ್ಬ ಜಾಯಿಂಟ್ ಡೈರಕ್ಟರೂ ಕೂಡ ಜೈಲನ್ನು ಅನುಭವಿಸಿದ್ದಾರೆ. ಅವರು ನಮ್ಮ ಬಂಧುಗಳಾಗಿದ್ದಾರೆ. ಬಂಧುಗಳಾಗಿದ್ದು, ಎಂತಹ ಪ್ರೆಷರ್ ತಂದರೂ ಕೂಡ ನಾನು ಕೇರ್ ಮಾಡಲಿಲ್ಲ. ಅದನ್ನು ತಾವು ಪ್ರಶಂಸೆ ಮಾಡಬೇಕು. ಜೊತೆಗೆ, ಇದನ್ನು ನಾವು ಕಂಡುಹಿಡಿದು ಲೋಕಾಯುಕ್ತಕ್ಕೆ ರೆಫರ್ ಮಾಡಿ, ಲೋಕಾಯುಕ್ತದವರು ತನಿಖೆ ನಡೆಸತಕ್ಕಂತಾದ್ದನ್ನು, ನೀವು ಸರ್ಕಾರಕ್ಕೆ ಪ್ರಶಂಸೆ ಮಾಡಬೇಕೇ ಹೊರತು, ನೈತಿಕ ಹೊಣೆ ಹೊರಬೇಕು, ನೀವು ತಪ್ಪು ಮಾಡಿದ್ದೀರಿ ಎಂದು ಹೇಳುವಂತಾದಲ್ಲ. ಇದು 1994ರಿಂದಲೇ ಆಗಿರತಕ್ಕಂತಾದ್ದು. ನಮ್ಮ ಸರ್ಕಾರ 1995ರಲ್ಲಿ ಬಂದಿರುವುದು. ಇದು ಹಿಂದೆಯಿಂದ ಆಗಿ ಬಂದಿದೆ. ಇದರ ಜೊತೆಗೆ ಪಂಡಿತ್ ಮೂಲ ಒಬ್ಬ ಸಣ್ಣ ಅಧಿಕಾರಿ ಮಾಡಲಿಕ್ಕೆ ಸಾಧ್ಯವಿಲ್ಲ. ಅವನಿಗೆ ಅಷ್ಟು ಅಧಿಕಾರವೂ ಇಲ್ಲ. ಯಾವುದೇ ಒಬ್ಬ ಟ್ರೆಜರಿ ಆಫೀಸರಿಗೆ, ಯಾವುದೇ ಒಂದು ಇಲಾಖೆ ಇರಬಹುದು, ಹಣ ನಿಗದಿ ಮಾಡಿರುವ ಕಾಪಿ ಮೊದಲೇ ಹೋಗುತ್ತದೆ. ನಾರಾಯಣಪುರ ಡ್ಯಾಮಿಗೆ ಇಷ್ಟು ಹಣವನ್ನು ಮಂಜೂರ್ಮಾಡಿದೆ. ಬಜೆಟ್‌ನಲ್ಲಿ ಅವಕಾಶ ಇದೆ. ಇದರ ಮೇಲೆ ಒಂದು ರೂಪಾಯಿ ಕೂಡ ಡ್ರಾ ಮಾಡುವುದಕ್ಕೆ ಅವಕಾಶ ಇಲ್ಲ. ಟ್ರಜರಿ ಆಫೀಸರ್ ಕೂಡ ಇವನ ಜೊತೆ ಶಾಮೀಲಾಗಿ ಕೆಲಸ ಮಾಡಿದ್ದಾರೆ. ಇದು 1-2-3-50 ಲಕ್ಷ ಅಲ್ಲ, 5 ಕೋಟಿ ರೂಪಾಯಿ! ಅದಾದ ಮೇಲೆ ಬ್ಯಾಂಕಿನವರು ಯಾವರೀತಿ ಡ್ರಾಮಾಡಿದರು, ಟ್ರಜರಿಯಲ್ಲಿ ಚೆಕ್ ರೂಪದಲ್ಲಿ ಕೊಡುತ್ತಾರೆ. ಚೆಕ್ ರೂಪದಲ್ಲಿ ಕೊಟ್ಟಂಥ ಹಣ, ಅದು ಖಾತೆ ಬದಲಾವಣೆಯಾಗಿ, ಅವರು ದುಡ್ಡನ್ನು ಡ್ರಾ ಮಾಡಬೇಕಾದರೆ, ದಾರಿಯೇ ಇಲ್ಲ ಬ್ಯಾಂಕ್ ಆಫೀಸರುಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಟ್ರಜರಿ ಆಫೀಸರು, ಅಧಿಕಾರಿಗಳು ಇವರೆಲ್ಲರೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ತಾವು ಕರೆಕ್ಟ್ ಮಾತು ಹೇಳಿದಿರಿ. ಆಡಿಟ್ ರಿಪೋರ್ಟ್ ಆದಾಗ, 38 ಲಕ್ಷ ಏನು ದುರುಪಯೋಗವಾಗಿದೆ, ಆಗಲೇ ನಾವು ಎಚ್ಚರಿಕೆ ತೆಗೆದುಕೊಂಡಿದ್ದರೆ, ರೀ ಕನ್ಸಿಲೇಷನ್ ಆಗಿದ್ದರೆ, ಅಥವಾ ಟ್ರಜರಿಯಲ್ಲಾಗಿದ್ದರೆ, ಅಥವಾ ಜಾಯಿಂಟ್ ಡೈರಕ್ಟರ್ ಆಫೀಸಿನಲ್ಲಿ ಆಗಿದ್ದರೆ, ಅಥವಾ ನಮ್ಮ ಆಡಿಟರ್ ಜನರಲ್ (ಅಕೌಂಟೆಂಟ್ ಜನರಲ್) ಅಲ್ಲಿ ಆಗಿದ್ದರೆ ಅಥವಾ ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಆಗಿದ್ದರೆ ಇದು ಅಲ್ಲಿಗೇ ಮುಚ್ಚಿಹೋಗುತ್ತಿತ್ತು. ಇದೇನಾಗಿದೆ, ಇದು ಕಂಟಿನ್ಯೂಯಸ್ ಪ್ರೋಸೆಸ್ ಆಗಿದೆ.

ನನಗೆ ಅನುಮಾನ ಬಂದು ಸಸ್ಪೆಂಡ್ ಮಾಡಿದ ಮೇಲೆ, ಅದೇಜಾಗ ಕೊಡಿ, ಮಾರ್ಚ್ 31ರ ವರೆಗೆ ಅಲ್ಲಿಯೇ ಇರಲಿ, ಆಮೇಲೆ ಎಲ್ಲಾದರೂ ಹಾಕಿಕೊಡಿ ಎಂದು ಯಾರೋ ಒಬ್ಬರು ಬಂದು ಹೇಳಿದರು. ಏಕೆ ಇಷ್ಟೊಂದು ಒತ್ತಡ ತರುತ್ತಿದ್ದಾನೆ ಎಂದು ನಾನು ಅನುಮಾನಪಟ್ಟಾಗ ಇದೆಲ್ಲಾ ಈಚೆಗೆ ಬಂತು. ಆಮೇಲೆ ಆಡಿಟ್ ವರದಿ ಈಚೆಗೆ ಬಂತು. ಆಮೇಲೆ ನಾನು ಹೇಳಿದೆ, ಕೂಡಲೇ ಇದನ್ನು ಲೋಕಾಯುಕ್ತಕ್ಕೆ ಕೊಡಿ ಎಂದು. ನಾವು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡುತ್ತೇವೆಂದು ನನಗೆ ರೆಕಮೆಂಡೇಷನ್ ಬಂತು. ನಾನು ಹೇಳಿದೆ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿದರೆ ಸತ್ಯ ಈಚೆಗೆ ಬರುವುದಿಲ್ಲ. ಸತ್ಯ ಈಚೆಗೆ ಬರಬೇಕಾದರೆ, ಲೋಕಾಯುಕ್ತದಿಂದಲೇ ತನಿಖೆ ಮಾಡಿಸಬೇಕೆಂಬ ಉದ್ದೇಶದಿಂದ, ಲೋಕಾಯುಕ್ತಕ್ಕೆ ರೆಫರ್ ಮಾಡಿದೆ. ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಲೋಕಾಯುಕ್ತದವರನ್ನೂ ಕೂಡ ಅನುಮಾನಪಡುತ್ತಿದ್ದೀರಿ. ಲೋಕಾಯುಕ್ತದವರು ಕೂಡ ಶಾಮೀಲಾಗಿದ್ದಾರೆ, ಇದು ಮುಚ್ಚಿ ಹೋಗುತ್ತದೆ, ಏನು ತನಿಖೆ ನಡೆಯುತ್ತಿದೆ, ಆ ತನಿಖೆಯ ದಾರಿ ತಪ್ಪಿಹೋಗತಕ್ಕಂಥ ಸಂಭವ ಬರಬಹುದು ಎಂಬ ಮಾತನ್ನು ತಾವು ಹೇಳುತ್ತಿದ್ದೀರಿ. ಖಂಡಿತ, ಇದ್ದರೂ ಇರಬಹುದು. ನನಗೆ ಲೋಕಾಯುಕ್ತದವರೆಲ್ಲಾ ಸತ್ಯಹರಿಶ್ಚಂದ್ರರು, ಅವರು ಮಾಡುವುದೆಲ್ಲಾ ನಿಷ್ಪಕ್ಷಪಾತವಾಗಿದೆ ಕರೆಕ್ಟ್ ಆಗಿ ಮಾಡುತ್ತಾರೆ ಎಂಬ ಭರವಸೆ ಇದ್ದರೂ ಕೂಡ, ಅದು ಸಾಧ್ಯವೋ ಇಲ್ಲವೋ ಎಂಬ ಅನುಮಾನವನ್ನು ನಾನೂ ವ್ಯಕ್ತಪಡಿಸಬೇಕಾಗುತ್ತದೆ. ಆದರೆ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ, ಸೈಮಲ್‌ಟೇನಿಯಸ್ಸಾಗಿ ಅಲ್ಲೂ ಮಾಡಿ, ಇಲ್ಲಿಯೂ ಕೂಡ ಮಾಡಿ ಎಂಬ ಆದೇಶವನ್ನು ಈಗಾಗಲೇ ಮಾಡಿದ್ದೇನೆ. ನೀವು ಹೇಳುವರೀತಿಯಲ್ಲಿ ಇದನ್ನು ಸಚಿವ ಸಂಪುಟದಲ್ಲಿ ತಂದು ಸಿಬಿಐ ಎನ್‌ಕ್ವೈರಿ ಆಗಬೇಕು, ಸಿಓಡಿ ಎನ್‌ಕ್ವೈರಿ ಆಗಬೇಕು ಎಂಬ ಭಾವನೆಯನ್ನು ವ್ಯಕ್ತಪಡಿಸಿ, ಅಲ್ಲಿ ನ್ಯಾಯ ದೊರೆಯುತ್ತದೆ ಎಂಬ ವಿಚಾರ ಏನಾದರೂ ತಮ್ಮ ಮನಸ್ಸಿನಲ್ಲಿದ್ದರೆ, ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಆದರೆ, ಒಂದು ಫಾರ್ಮಾಲಿಟೀಸ್‌ನ್ನು ನಾವು ಮಾಡಬೇಕಾಗುತ್ತದೆ. ಸಿಬಿಐ ಎನ್‌ಕ್ವೈರಿಗೆ ನಾನು ಇಲ್ಲಿ ಕುಳಿತುಕೊಂಡು ಭರವಸೆ ಕೊಡುವುದಕ್ಕಾಗುವುದಿಲ್ಲ. ಇದನ್ನು ಸಚಿವ ಸಂಪುಟದ ಮುಂದೆ ತಂದು, ಇಂತಹ ಗುರುತರವಾದಂಥ ತಪ್ಪು, ಲೋಪ ಆಗಿದೆ ಸರ್ಕಾರದ ಕಡೆಯಿಂದ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ, ಅವರ ಮೇಲೆ ಶಿಕ್ಷೆ ಮಾಡಬೇಕು. ಯಾರು ತಪ್ಪಿತಸ್ಥರು ಇದ್ದಾರೆ, ಅವರನ್ನು ಯಾವುದೇ ಕಾರಣಕ್ಕೂ ಮುಚ್ಚುತಕ್ಕಂತಾದ್ದು, ಅವರನ್ನು ಸೇಫ್‌ಗಾರ್ಡ್‌ಮಾಡತಕ್ಕ ವಿಚಾರ ಸರ್ಕಾರಕ್ಕೆ ಇಲ್ಲವೇ ಇಲ್ಲ. ಅವನು ಎಷ್ಟೇ ದೊಡ್ಡ ಮನುಷ್ಯನಾಗಿರಲಿ, ಯಾರೇ ಆಗಿರಲಿ ಅವರಿಗೆ ಶಿಕ್ಷೆಯಾಗಬೇಕು. ಆ ಶಿಕ್ಷೆಯಾಗುವುದಕ್ಕೆ ನಾವು ಯಾವುದೇ ರೀತಿಯ ತನಿಖೆಗೆ ಸಿದ್ಧರಾಗಿದ್ದೇವೆ. ಆದರೆ, ಫಾರ್ಮಾಲಿಟೀಸನ್ನು ಮಾಡಬೇಕಾಗುತ್ತದೆ. ಆ ಫಾರ್ಮಾಲಿಟೀಸನ್ನು ಮಾಡಿ, ತನಿಖೆಗೆ ಒಳಪಡಿಸುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇನ್ನೊಂದು

ಹೊಸ ವಿಚಾರ, ಕೊಲೆ ಬಗ್ಗೆ ಹೇಳಿದರು. ಅದು ಈ ಕೇಸಿಗೆ ಸಂಬಂಧಪಟ್ಟಿದೆಯೇ ಇಲ್ಲವೇ ಎಂಬ ವಿಚಾರ ನಮಗೆ ಗೊತ್ತಿಲ್ಲ. ಇದು ಹೊಸದಾಗಿ ನೀವು ಎತ್ತಿರತಕ್ಕ ಒಂದು ವಿಚಾರ. ಈ ಘಟನೆಯಲ್ಲಿ, ಈ ಕೇಸ್ ಕೂಡ ಅಳವಡಿಸಲ್ಪಟ್ಟಿದೆ ಎಂದರೆ ಬಹುಶಃ ಲೋಕಾಯುಕ್ತ ಏನು ತನಿಖೆ ನಡೆಸುತ್ತಿದ್ದಾರೆ, ಅವರು ಬೆನ್ನುಹತ್ತಿ ಆ ಇನ್‌ವೆಸ್ಟಿಗೇಷನ್ ಸರಿಯಾಗಿ ಮಾಡಿದರೆ, ಆ ಕೊಲೆಯ ಪ್ರಕರಣದ ಸತ್ಯಾಂಶವೂ ಕೂಡ ಈಚೆಗೆ ಬರುವುದಕ್ಕೆ ಸಾಧ್ಯವಾಗುತ್ತದೆಂದು ನಾನಾದರೂ ಕೂಡ ಭಾವನೆ ಮಾಡಿದ್ದೇನೆ. ಇಷ್ಟು ಮಾತನ್ನು ಹೇಳಿ ಸರ್ಕಾರ ಯಾವುದೇ ಕಾರಣಕ್ಕೂ ಕೂಡ ಮುಚ್ಚತಕ್ಕ ಪ್ರಶ್ನೆ ಇಲ್ಲ. ಇದರಲ್ಲಿ ಜಯಕುಮಾರ್ ಆಗಲೀ ಅಥವಾ ನಮ್ಮ ಮುಖ್ಯಮಂತ್ರಿಯವರ ಕಾರ್ಯಾಲಯ, ಯಾರೇ ಆದರೂ ಕೂಡ ಒಂದು ಕೂದಲೆಳೆಯಷ್ಟು ಇನ್‌ವಾಲ್ ಆಗಿಲ್ಲ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಆ ರೀತಿ ಪ್ರೂವ್ ಆದರೆ, ನಾನು ಒಂದು ಘಳಿಗೆ ಕೂಡ ಈ ಒಂದು ಸ್ಥಾನದಲ್ಲಿ ಇರುವುದಕ್ಕೆ ಅನರ್ಹನಾಗುತ್ತೇನೆ.

4. 10 ಪಿ.ಎಂ

ಒಂದು ಗಳಿಗೆ ಕೂಡ ಈ ಸ್ಥಾನದಲ್ಲಿ ಇರಬಾರದು. ಆದರೆ ಏನಾಗಿದೆ, ಈ ರೀತಿ ವ್ಯವಸ್ಥೆಯಾಗಿದೆ, ಎಲ್ಲಾ ಇಲಾಖೆಯಲ್ಲೂ ಇಂಥ ಭ್ರಷ್ಟಾಚಾರ ನಡೆಯುತ್ತಿದೆ. ಅದಾದಮೇಲೆ ನಾನು ಈ ತನಿಖೆಯನ್ನು ಒಳಪಡಿಸಿ ಎಲ್ಲಾ ಜಿಲ್ಲೆಗೂ ಆದೇಶ ನೀಡಿ ತನಿಖೆಯನ್ನು ನಡೆಸುತ್ತಿದ್ದೇನೆ. ಇದು ಏನಾದರೂ ಕೂಡ ಗುಲ್ಬರ್ಗಾದಲ್ಲಿ ಒಂದರಲ್ಲಿ ಆಗಿದೆಯೋ, ಇದು ಬೇರೆ ಏನಾದರೂ ಕೂಡ ಟ್ರೆಜರಿಯವರು ಬ್ಯಾಂಕ್‌ನವರು ಸೇರಿ ಇವರೆಲ್ಲಾ ಶಾಮಿಲಾಗಿ ಇನ್ನಿತರ ಕಡೆ ಇದೇ ರೀತಿ ಆಗಿದೆ ಎಂದರೆ ಎಲ್ಲೂ ಕೂಡ ಆಗಿಲ್ಲ. ಆದರೆ ನಮ್ಮ ಇಲಾಖೆಗೆ ನಷ್ಟವಾಗದಿದ್ದರೂ ಕೂಡ ಸರ್ಕಾರಕ್ಕೆ ನಷ್ಟವಾಗಿದೆ. ಈ ಅಕೌಂಟೆಲ್ಲಾ ಟ್ರೆಜರಿಯಲ್ಲಿ ಕೊಡಬೇಕಾಗುತ್ತದೆ. ಟ್ರೆಜರಿಯಲ್ಲಿ ಯಾವ ರೀತಿ ಲೆಕ್ಕ ಕೊಡುತ್ತಾರೋ ನನಗಂತೂ ಗೊತ್ತಿಲ್ಲ. ಏಕೆಂದರೆ ಅವರು ನಾವು ಹತ್ತು ರೂಪಾಯಿ ಜಾಸ್ತಿ ಮಾಡಿದರೆ ವಾಪಸ್ ಸಿಗ್ನೇಚರ್ ಕಳುಹಿಸುತ್ತಾರೆ. ಈಗ ಉದಾ:ಗೆ ಕರ್ನಾಟಕ ಹಾರ್ಟಿಕಲ್ಚರಲ್ ಫೆಡರೇಷನ್ ಮಾಡಬೇಕೆಂದು ಹೋಗುತ್ತಿದ್ದೇವೆ. ಅದು ಎನ್.ಸಿ.ಡಿ.ಸಿಯಲ್ಲಿ ಟೈಅಪ್ ಆಗಿ ಒಂದೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡುವುದಕ್ಕೆ ಆರು ತಿಂಗಳಿಂದ ಸತತ ಪ್ರಯತ್ನ ಮಾಡುತ್ತಿದ್ದೇನೆ. ಒಂದು ರೂಪಾಯಿ ತೆಗೆದುಕೊಳ್ಳುವುದಕ್ಕಾಗಿಲ್ಲ. ಅಂಥ ಒಂದು ಕಟ್ಟುನಿಟ್ಟಿನ ಶಿಸ್ತು ಅಕೌಂಟೆಂಟ್ ಜನರಲ್‌ನಲ್ಲಿ ಇರುವಾಗ ಅಥವಾ ನಮ್ಮ ಆರ್ಥಿಕ ಇಲಾಖೆ ಇರುವಾಗ ಇದು ಹೇಗೆ ಸಾಧ್ಯವಾಗುತ್ತದೆ ಎಂದು ನನಗೂ ಆಶ್ಚರ್ಯವಾಗುತ್ತಿದೆ. ನಿಮಗೆ ಎಷ್ಟು ಆಶ್ಚರ್ಯವಾಗುತ್ತದೆಯೋ ಎಷ್ಟು ಅದ್ಭುತವಾಗಿ ಎಷ್ಟು ವ್ಯವಸ್ಥಿತವಾಗಿ ಈ ಘಟನೆ ನಡೆದಿದೆಯೋ ಇಂಥ ಹಿನ್ನೆಲೆಯಲ್ಲಿ ಒಬ್ಬ ಹೆಚ್.ಎ.ಇರುವುದಕ್ಕೆ ಸಾಧ್ಯವಿಲ್ಲ. ನೀವು ಹೇಳಿದಂತೆ ಮಲ್ಲಣ್ಣ ಸತ್ತುಹೋದವನ ಪ್ರಭಾವವೂ ಇರಬೇಕು. ಇಲ್ಲಿ ಯಾರೋ

ಕುತಂತ್ರ ಮಾಡಿ ಪಿತೂರಿಮಾಡಿ ಇಂಥ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಹೊರತು ಸಾರಾಸಗಟಾಗಿ ಒಬ್ಬ ಅಧಿಕಾರಿ ಮಾಡಲಿಕ್ಕೆ ಸಾಧ್ಯವಿಲ್ಲ. ಇದರ ಹಿನ್ನೆಲೆ ಇದೆ. ಇದೆಲ್ಲಾ ಪೂರ್ಣ ತನಿಖೆಯಾಗಬೇಕಾದರೆ ತಾವು ಹೇಳುವ ರೀತಿಯಲ್ಲಿ ಲೋಕಾಯುಕ್ತ ತನಿಖೆ ನಡೆದು ಅದರ ವರದಿ ಬರಲಿ. ಆ ವರದಿಯ ಮೇಲೆ ನಿಮಗೆ ಅದು ತೃಪ್ತಿಯಾಗಲಿಲ್ಲ ಎಂದರೆ ಬೇರೆ ಒಂದು ತನಿಖೆಯ ಅವಶ್ಯಕತೆ ಇದೆ ಎಂದರೆ ಅದನ್ನೂ ಮಾಡಿಸೋಣ ಎನ್ನುವ ಭರವಸೆಯನ್ನು ಈ ಸದನದ ಮೂಲಕ ತಮಗೆ ಕೊಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಉಪಾಧ್ಯಕ್ಷರೇ, ಮಂತ್ರಿಗಳಿಗೆ ಕಳಕಳಿ ಇದೆ ಎನ್ನುವುದಾದರೆ ನಾನು ಅದನ್ನು ತುಂಬುಹೃದಯದಿಂದ ಅಭಿನಂದನೆ ಮಾಡುತ್ತೇನೆ. ಇದು 1994 ರಿಂದಲೇ ನಡೆದುಕೊಂಡು ಬಂದಿದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ಗಮನಕ್ಕೆ ಬಂದಿದ್ದು ಅಧಿಕೃತವಾಗಿ 1996ರಲ್ಲಿಯೇ ಬಂದಿದೆ. ನಿಮ್ಮ ಪತ್ರವನ್ನೇ ಕೊಡುತ್ತೇನೆ, ಇದು ಡೈರೆಕ್ಟರ್ ಬರೆದಿರುವ ಪತ್ರ. ಪತ್ರದ ಕಾಪಿ ಈ ರೀತಿ ತಾಳೆಯಾಗುತ್ತಿಲ್ಲ. ದುರಪಯೋಗವಾಗಿದೆ ಎಂದು ಹೇಳಿ ಜಾಯಿಂಟ್ ಡೈರೆಕ್ಟರ್ ಬರೆದಿದ್ದಾರೆ. ಅಂದರೆ ಸರ್ಕಾರದ ಗಮನಕ್ಕೆ ಅದು ಬಂತು. ಏತಕ್ಕೆ ಸುಮ್ಮನೆ ಇದ್ದಿರಿ ಎಂಬುದು ನನ್ನ ಪ್ರಶ್ನೆ. ಮತ್ತೊಂದು ಇನ್‌ಛಾರ್ಜ್‌ನ್ನು ಹೇಗೆ ಒಬ್ಬ ಹಾರ್ಟಿಕಲ್ಚರ್ ಅಸಿಸ್ಟೆಂಟ್‌ನ್ನು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಆಗಿ ಇನ್‌ಛಾರ್ಜ್ ಮಾಡಿದರು? ಅದೂ ಕೂಡ ಇಲ್ಲಿಂದ ಡೈರೆಕ್ಟರ್ ಆಫೀಸಿನಿಂದ ಆ ಆದೇಶ ಹೇಗೆ ಹೋಯಿತು? ಅವರ ಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಇದರಲ್ಲಿ ಡೈರೆಕ್ಟರ್ ಕೂಡ ಸೇರಿಕೊಂಡಿದ್ದಾರೆ. ಇದನ್ನು ಮಾಡಿದ್ದಾರೆ ತಾನೇ? ತಪ್ಪಾಗಿದೆಯಲ್ಲಾ, ಅವರ ಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ನಾನು ಅದಕ್ಕೆ ಸರ್ಕಾರ ಕೂಡ ಶಾಮೀಲಾಗಿದೆ ಎಂದು ಹೇಳಿದೆ. ಈಗ ಡೈರೆಕ್ಟರ್ ಇನ್‌ಛಾರ್ಜ್ ಮಾಡಿ ಎಂದು ಇಲ್ಲಿಂದ ಆದೇಶವನ್ನು ಕೊಟ್ಟಿದ್ದಾರೋ ಇಲ್ಲವೋ? ಕೊಟ್ಟಮೇಲೆ ಅವರಿಗೆ ಕೊಡಲಿಕ್ಕೆ ಅಧಿಕಾರವಿತ್ತೇ? ಅದು ಹಾರ್ಟಿಕಲ್ಚರ್ ಅಸಿಸ್ಟೆಂಟ್‌ನ್ನು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಮಾಡಲಿಕ್ಕೆ ಇತ್ತೇ? ಕಾನೂನನಿಲ್ಲಿ ಅವಕಾಶವಿಲ್ಲ. ಮತ್ತೆ ಹೇಗೆ ಇವರು ಆದೇಶವನ್ನು ಕೊಟ್ಟರು? ಅವರ ಮೇಲೆ ನೀವ್ಯಾಕೆ ಕ್ರಮ ತೆಗೆದುಕೊಳ್ಳಲಿಲ್ಲ? ಆಡಿಟ್‌ನವರು ಆಡಿಟ್ ಮಾಡಿಕೊಂಡು ಬಂದು ಆಡಿಟ್ ರಿಪೋರ್ಟ್‌ನ್ನು ಏತಕ್ಕೆ ಸಬ್‌ಮಿಟ್ ಮಾಡಲಿಲ್ಲ? ಹಾಗೆಯೇ ಇಟ್ಟುಕೊಂಡಿದ್ದರು. ಎ.ಜಿ.ಆಫೀಸ್‌ನವರು ರಿಪೋರ್ಟ್ ಕೊಟ್ಟಮೇಲೆ ಅದು 21 ತಿಂಗಳಾದಮೇಲೆ ಅವರೇಕೆ ವರದಿಯನ್ನು ಕೊಟ್ಟರು? ಅಷ್ಟು ದಿವಸ ಏಕೆ ಸುಮ್ಮನೆ ಇದ್ದರು? ಅವರ ಮೇಲೆ ನೀವ್ಯಾಕೆ ಕ್ರಮ ತೆಗೆದುಕೊಳ್ಳಲಿಲ್ಲ? ಕೆಲವರ ಮೇಲೆ ಕ್ರಮ ತೆಗೆದುಕೊಂಡಿರಿ. ಸಸ್ಪೆಂಡ್ ಇಟ್ಟಿರಿ. ಒಂದೂವರೆ ತಿಂಗಳಿಗೆ ಮತ್ತೆ ಅವರನ್ನೆಲ್ಲಾ ಕೂಡ ಸಾರಾಸಗಟು ರೀಇನ್‌ಸ್ಟೇಟ್ ಮಾಡಿದಿರಿ. ಏಕೆ? ಅವರು ತಪ್ಪು ಮಾಡಿರಲಿಲ್ಲವೇ? ಅವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಹೇಳಿ. ಅದಾದಮೇಲೆ ಈಗ ತಾವೇ ಹೇಳಿದಿರಿ, ಪೊಲಿಟಿಕಲ್

ಪ್ರೆಷರ್ ಬಂತು ಎಂದು ಹೇಳಿ ಮತ್ತೆ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆ ಪತ್ರ ಬಂತು ಎಂದು ಹೇಳಿದಿರಿ. ನೀವು ಅದನ್ನು ಸತ್ಯಾಂಶವನ್ನು ಹೇಳಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದ್ದರಿಂದಲೇ ಅದನ್ನೇ ನಾನು ಒತ್ತಾಯಮಾಡಿದ್ದು. ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆ ಮುಖ್ಯಮಂತ್ರಿಗಳ ಹೆಸರಿನಲ್ಲಿ ಮುಖ್ಯಮಂತ್ರಿಗಳ ಕಛೇರಿಯಿಂದ ಹೇಗೆ ಆದೇಶ ಹೋಯಿತು ಎನ್ನುವ ಕಡತವನ್ನು ಈ ಸದನದ ಮುಂದೆ ದಯಮಾಡಿ ಮಂಡಿಸಬೇಕು. ಅಲ್ಲೇ ಸತ್ಯಾಂಶ ಇರುವುದು. ಅದು ಈ ರಾಜ್ಯದ ಹೈಯಸ್ಟ್ ಅಥಾರಿಟಿಯವರು. ಹೈಯಸ್ಟ್ ಬಾಡಿ ಅದು. ಅಲ್ಲಿ ಲೋಪ ದೋಷವಾಗಿದೆ. ಅದೇ ಸ್ಥಳಕ್ಕೆ ರೀ-ಇನ್‌ಸ್ಟೇಟ್ ಮಾಡಿ ಎಂದು ಅಲ್ಲಿಂದ ಆದೇಶವನ್ನು ಕೊಟ್ಟಿದ್ದಾರೆ. ಈಗ ಅದನ್ನು ತನಿಖೆ ಮಾಡಲಿಕ್ಕೆ ಸಿ.ಓ.ಡಿ ಕೈಯಲ್ಲಿ ಆಗುತ್ತದೆಯೇ? ಇಲಾಖೆಯ ತನಿಖೆಯಲ್ಲಿ ಆಗುತ್ತದೆಯೇ ಸಿ.ಎಂ.ಆಫೀಸಿನ ಬಗ್ಗೆ ತನಿಖೆ ಮಾಡಲಿಕ್ಕೆ? ಅದಕ್ಕಾಗಿಯೇ ಇದನ್ನು ಸಿ.ಬಿ.ಐ.ತನಿಖೆಗೆ ರೆಫರ್ ಮಾಡಬೇಕು ದಯಮಾಡಿ. ನಿಮಗೆ ಕಳಕಳಿ ಇದೆ. ಕಳಕಳಿ ಇದೆ ಎನ್ನುವುದು ವಾಸ್ತವಿಕವಾಗಿ ನೈಜವಾಗಿದ್ದರೆ ನೀವು ಈ ಕೇಸನ್ನು ಸಿಬಿಐಗೆ ರೆಫರ್ ಮಾಡಬೇಕು. ಮತ್ತೆ ಮಲ್ಲಣ್ಣ ಅವನು ಗಾರ್ಡನರ್. ಅವನೇ ಈ ಬಿಲ್ಲುಗಳನ್ನು ಬರೆದವನು. ಅವನ ಹ್ಯಾಂಡ್‌ರೈಟಿಂಗ್‌ನಲ್ಲಿ. ಅವನು ಬದುಕಿದರೆ ಇದು ಗೊತ್ತಾಗುತ್ತದೆ ಎಂದು ಹೇಳಿ ಅವನನ್ನು ಇವರೆಲ್ಲಾ ಸೇರಿಕೊಂಡು ಯಾರ್ಯಾರು ದುಡ್ಡುತಿಂದಿದ್ದರು ಇವರೆಲ್ಲಾ ಸೇರಿ ಮುಗಿಸಿದರು. ಮುಗಿಸಿದ್ದನ್ನು ಮತ್ತೆ ನಿಮ್ಮ ಪೋಲೀಸ್ ಇಲಾಖೆಯವರು ಕೂಡ ಹತ್ತು ಲಕ್ಷ ರೂಪಾಯಿ ತೆಗೆದುಕೊಂಡು ಮುಚ್ಚಿಹಾಕಿದರು. ಆದರ ಬಗ್ಗೆ ಏನೂ ತನಿಖೆಯಾಗುತ್ತಿಲ್ಲ. ಲೋಕಾಯುಕ್ತದವರಿಗೆ ರೆಫರ್ ಮಾಡಿ ಹತ್ತು-ಹನ್ನೊಂದು ತಿಂಗಳಾಯಿತು. ಏನು ಪ್ರಗತಿಯಾಗಿದೆ ಹೇಳಿ. ಏನು ಪ್ರಗತಿ ವಿವರ ಕೊಟ್ಟಿದ್ದಾರೆ ಹೇಳಿ. ಎಲ್ಲೆಲ್ಲಿ ಎಷ್ಟು ದುಡ್ಡು ಇದೆ ಎಂದು ಹೇಳಿ. ಅದಾದಮೇಲೆ ನಿಮ್ಮ ಡೈರೆಕ್ಟರೋ ನೀವೋ ಆ ನಾರಾಯಣಪುರ ಫಾರಂಗೆ ಹೋಗಿ ಅಥವಾ ಗುಲ್ಬರ್ಗಾಕ್ಕೆ ಹೋಗಿ ಈ ಬಗ್ಗೆ ಗಮನವನ್ನುಹರಿಸಿದ್ದೀರೊ? ಇಲ್ಲಿ ಹಲವಾರು ತರಹ ಲೋಪದೋಷವಾಗಿದೆ. ಇದರ ನೈತಿಕ ಹೊಣೆ ಹೊತ್ತು ನಾನು ಮೊದಲೇ ಹೇಳಿದೆ. ನಿಮಗೆ ಕಳಕಳಿ ಇದ್ದರೂ ಕೂಡ ನೀವು ನೈತಿಕ ಹೊಣೆ ಹೊತ್ತು ಒಂದು ಒಳ್ಳೆಯ ಸಂಪ್ರದಾಯ ಹಾಕಿ. ರಾಜೀನಾಮೆ ಕೊಡಿ. ಸರ್ಕಾರ ಇದರ ಬಗ್ಗೆ ದಯಮಾಡಿ ಸಿ.ಬಿ.ಐ. ತನಿಖೆಗೆ ಆದೇಶ ಮಾಡಬೇಕೆಂದು ಹೇಳಿ ಮತ್ತೊಮ್ಮೆ ನಾನು ತಮ್ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಹೇಳಿದಹಾಗೆ ಇವೆಲ್ಲಾ ತಪ್ಪು ಆಗಿದೆ ಎಂದು ಗೊತ್ತಾದದ್ದೇ ಎನ್‌ಕ್ವೈರಿಗೆ ಬಂದಾದಮೇಲೆ. ರಾಮಸ್ವಾಮಿಯವರು ಹೇಳಿರುವುದು ಒಬ್ಬ ಹೆಚ್.ಎ.ಅಧಿಕಾರಿಗೆ ನಾವು ಡಬಲ್ ಇನ್‌ಛಾರ್ಜ್ ಕೊಡುವುದಕ್ಕೆ ಬರುವುದಿಲ್ಲ. ಕಾನೂನುಪ್ರಕಾರ ಅವಕಾಶವಿಲ್ಲ. ಒಬ್ಬ ಅಧಿಕಾರಿಗೆ ಮ್ಯಾಕ್ಸಿಮಮ್ ಎಂದರೆ ಪೋಸ್ಟ್‌ನಲ್ಲಿ ಅವನು

ಇನ್‌ಛಾರ್ಜ್ ಇರಬಹುದು. ಎರಡುಪೋಸ್ಟ್‌ಗೆ ಇನ್‌ಛಾರ್ಜ್ ಇರಲಿಕ್ಕೆ ಕಾನೂನುಪ್ರಕಾರ ಯಾವುದೇ ಸ್ಥಾನದಲ್ಲೂ ಅವಕಾಶವಿಲ್ಲ. ಅದು ಮೊದಲನೇ ತಪ್ಪಾಗಿರುವುದು. ಇದು ಯಾವಾಗ ಗೊತ್ತಾಯಿತು? ಇದು ಗೊತ್ತಾಗಿದ್ದು ನಾವು ಎನ್‌ಕ್ವೈರಿ ಮಾಡಿ ಎಂದು ಹೇಳಿದಮೇಲೆ. ಅಲ್ಲಿಯತನಕ ಇವರೇನು ಇನ್‌ಛಾರ್ಜ್ ಇದ್ದಾರೆ, ಡಬಲ್ ಛಾರ್ಜ್ ಇದ್ದಾನೆ ಎಂದು ನಮಗೆ ಪೂರ್ಣ ಗೊತ್ತಾಗಲಿಲ್ಲ. ಇದು ಸರ್ಕಾರದ ವ್ಯವಸ್ಥೆಯಲ್ಲಿ ಇದೆಲ್ಲಾ ನಡೆಯುತ್ತಿರುತ್ತದೆ. ಈಗ ಮಾನ್ಯ ಶಾಸಕರುಗಳು ಬರುತ್ತಾರೆ, ಮಂತ್ರಿಗಳ ಹತ್ತಿರ ಬರುತ್ತಾರೆ, ಯಾವುದೋ ಒಂದು ಹೇಳುತ್ತಾರೆ. ಇಂಥವರನ್ನು ಇಲ್ಲಿಗೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳುತ್ತಾರೆ. ಇದು ಸ್ವಾಭಾವಿಕವಾಗಿ ಎಲ್ಲಾ ಇಲಾಖೆಯಲ್ಲೂ ನಡೆಯುವಂಥದ್ದು. ಅಥವಾ ತಮ್ಮಿಂದಲೇ ನಮಗೆ ಒಂದು ಪತ್ರ ಬರುತ್ತದೆ. ಇಂಥ ಅಧಿಕಾರಿಯನ್ನು ಯಾರೋ ಸಸ್ಪೆಂಡ್ ಮಾಡಿದ್ದಾರೆ, ಅವರನ್ನು ರೀ-ಇನ್‌ಸ್ಟೇಟ್ ಮಾಡಿ. ಇವನಿಗೆ ಇಲ್ಲಿಗೆ ವರ್ಗಾವಣೆ ಮಾಡಿ ಎಂದು ತಾವೇ ನಮಗೊಂದು ಪತ್ರವನ್ನು ಕಳುಹಿಸುತ್ತೀರಿ. ಆಗ ರಾಮಸ್ವಾಮಿಯವರನ್ನು ನಂಬಿ ಒಬ್ಬ ಎಂಎಲ್‌ಎ ಹೇಳಿದರಲ್ಲಾ ಎನ್ನುವ ಕಾರಣಕ್ಕೋಸ್ಕರ ಅದನೆಲ್ಲಾ ಇವನು ನಾವು ಅದನ್ನು ಟ್ರಾನ್ಸ್‌ಫರ್ ಮಾಡುವಾಗ, ಸಸ್ಪೆನ್‌ಷನ್ ರಿವೋಕ್ ಮಾಡುವಾಗ ಇದೆಲ್ಲಾ ತನಿಖೆಯ ಆಧಾರಗಳನ್ನು ನೋಡುವುದಿಲ್ಲ. ಆಗ ನಿಮ್ಮನ್ನು ನಾವು ನಂಬುತ್ತೇವೆ. ಎಂಎಲ್‌ಎಗಳನ್ನೂ ನಂಬುತ್ತೇವೆ. ಶಿಫಾರಸ್ಸು ಯಾರು ಮಾಡಿರುತ್ತಾರೆ, ಅವರನ್ನೂ ನಾವು ನಂಬುತ್ತೇವೆ. ಅವರನ್ನು ನಂಬಿ ಇವನು ಆರು ತಿಂಗಳೊಳಗೆ ಸಸ್ಪೆಂಡ್ ಆಗಿದ್ದಾನೆ, ಆರು ತಿಂಗಳಾದ ಮೇಲೆ ಕಾನೂನುಪ್ರಕಾರ ಸಸ್ಪೆನ್‌ಷನ್ ಆರ್ಡರನ್ನು ರಿವೋಕ್ ಮಾಡಬೇಕೆಂದು ಕಾನೂನು ಹೇಳುತ್ತದೆ ಅದಕ್ಕೋಸ್ಕರ ಮಾನ್ಯ ರಾಮಸ್ವಾಮಿಯವರು ಹೇಳಿರಬಹುದು ಎಂದು ಹೇಳಿ ನಿಮ್ಮ ಪತ್ರದಮೇಲೆ ನಾವು ವಿಚಾರಣೆ ಬಾಕಿ ಇಟ್ಟು ಈ ಅಮಾನತ್ತನ್ನು ರದ್ದುಪಡಿಸಿ ಇವರಿಗೆ ಇಂಥ ಕಡೆ ವರ್ಗಾವಣೆ ಮಾಡಿ ಎನ್ನುವಂಥದ್ದು ಎಲ್ಲಾ ಇಲಾಖೆಯಲ್ಲೂ ಎಲ್ಲಾ ಸಚಿವರು ಮಾಡುವ ಒಂದು ಪ್ರಕ್ರಿಯೆ. ಅಂಥ ಸಂದರ್ಭದಲ್ಲಿ ಇವರು ಇಂಥ ಕಳ್ಳರು ಇದ್ದಾರೆ ಎಂದು ಯಾರಿಗೂ ಗೊತ್ತಾಗುವುದಿಲ್ಲ. ಎಲ್ಲಾ ಕಡೆ ಕಳ್ಳರೂ ಇದ್ದಾರೆ ಎಂಧು ಹೇಳುವುದಿಲ್ಲ. ಎಲ್ಲಾ ಕಡೆ ಒಳ್ಳೆಯವರೂ ಇದ್ದಾರೆ. ಇಷ್ಟೊಂದು ಜನ ಇದ್ದಾರೆ ನಮ್ಮ ಇಲಾಖೆಯಲ್ಲಿ. ನಾನು ಎಲ್ಲಾ ಕಡೆ ತನಿಖೆ ಮಾಡಿ ಇನ್ನು ಕೆಲವು ಲೋಪದೋಷಗಳು ನಮ್ಮ ಇಲಾಖೆಯಲ್ಲಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅದೆಷ್ಟಾದರೂ ತನಿಖೆ ನಡೆಸಿದರೆ ಇನ್ನೂ ಆಳದವರೆಗೂ ಹೋಗುತ್ತದೆ. ಅವನಿಗೇನು ನೋಬಲ್ ಪ್ರೈಜ್ ಕೊಡಬೇಕು ಎಂದು ಕಾಣುತ್ತದೆ. 5ಕೋಟಿ ರೂಪಾಯಿ ಎಷ್ಟರಮಟ್ಟಿಗೆ ಹೇಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು ಎನ್ನುವುದೇ ಒಂದು ಅದ್ಭುತವಾಗಿದೆ. ಹೇಗೆ ಸಾಧ್ಯವಾಯಿತು ಎಂದು ನಮಗೆ ತಲೆಯಲ್ಲಿಯೇ ಹೊಳೆಯುವುದಿಲ್ಲ. ಏನು ಆಶ್ಚರ್ಯ? ಒಬ್ಬ ಎ.ಹೆಚ್.ಓ. ಇದ್ದವನು ಐದು ಕೋಟಿ ರೂಪಾಯಿ ತೆಗೆಯುತ್ತಾನೆ ಎಂದರೆ ನಮ್ಮ ಅರ್ಥ ಬಜೆಟ್ ಇಲ್ಲ ನಮ್ಮ

ಪ್ಲಾನ್‌ನಲ್ಲಿ. ಐದು ಕೋಟಿ ರೂಪಾಯಿ ನಮಗೆ $13^1/_2$ ಕೋಟಿ ರೂಪಾಯಿ ಪ್ಲಾನ್‌ನಲ್ಲಿ ಬಜೆಟ್ ಇರುವುದು. ಇಂಥ ನೂರಾರು ಫಾರಂಗಳಿವೆ. ನೂರಾರು ಫಾರಂಗಳಲ್ಲಿ ಇವತ್ತೆಲ್ಲಾ 20 ಲಕ್ಷ 25 ಲಕ್ಷ ಒಂದೊಂದು ಫಾರಂಗೆ ಹೋಗುತ್ತದೆ. ಇನ್ನು 5 ಕೋಟಿ ರೂಪಾಯಿ ಇವನು ಡ್ರಾ ಮಾಡುತ್ತಾನೆ ಎಂದರೆ ಮಾನ್ಯ ರಾಮಸ್ವಾಮಿಯವರಿಗೆ ಹೇಳುತ್ತೇನೆ. ಮತ್ತೆ ನಾಳೆ ಇದೇ ಸದನದ ಮುಂದೆ ಇನ್ನೊಂದು ವಿಚಾರ ಬರಬಹುದು. ಈ ತಪ್ಪನ್ನು ತಿದ್ದುವುದಕ್ಕೆ ಹೋಗಿ ಯಾರು ನಮ್ಮ ಇಲಾಖೆಯಲ್ಲಿ ಕೆಲಸವನ್ನೇ ಮಾಡಿಲ್ಲ. ಕೋರ್ಟ್‌ಗೆ ಹೋಗಿದ್ದಾರೆ. 200-250 ಜನರು ನಾರಾಯಣಪುರ ಡ್ಯಾಂನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿ ಸಂಬಳವನ್ನು ಡ್ರಾ ಮಾಡಿದ್ದಾರೆ. ಅದು ಇನ್ನೂ ಎರಡನೇ ತನಿಖೆಗೆ ಬರುತ್ತದೆ. ಅದನ್ನು ಲೆಕ್ಕಹಾಕಿದರೆ ಇನ್ನು ಐದಾರು ಕೋಟಿ ರೂಪಾಯಿಗೆ ಹೋಗಬಹುದು. ಅದನ್ನೂ ಕೂಡ ಈಗಾಗಲೇ ನಾನು ತನಿಖೆಗೆ ಒಳಪಡಿಸಿದ್ದೇನೆ. ಅವರೆಲ್ಲಾ ಹೇಳುತ್ತಿದ್ದಾರೆ, ನಾವು ಕೆಲಸ ಮಾಡುತ್ತಿದ್ದೇವೆ ಎನ್ನುತ್ತಾರೆ. ಕೆಲಸವನ್ನೂ ಮಾಡಿಲ್ಲ. ಅವರ ಅಡ್ರೆಸ್ಸೂ ಗೊತ್ತಿಲ್ಲ. ಅವರು ಎಲ್ಲಿದ್ದಾರೆ ಎಂದು ಗೊತ್ತಿಲ್ಲ. 200 ಜನರೂ ಕೂಡ ಈ ಕೇಸನ್ನು ಹುಡುಕುವುದಕ್ಕೆ ಹೋಗಿ ಆ ಕೇಸು ಸಿಕ್ಕಿದೆ. ಅದನ್ನು ಹುಡುಕಿಕೊಂಡು ಹೋದರೆ ಅದು ಐದಾರು ಕೋಟಿ ರೂಪಾಯಿಗೆ ಬರಬಹುದು. ಸುಮಾರು 200 ಜನ ಕೋರ್ಟ್‌ಗೆ ಹೋಗಿ ನಾವು ಪರ್ಮನೆಂಟ್ ಆಗಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ, ನಮ್ಮನ್ನು ನೀವು ಪರ್ಮನೆಂಟ್ ಮಾಡಬೇಕು. ನಾವು ಹತ್ತು ವರ್ಷದಿಂದ ಮಾಡಿದ್ದೇವೆ, ನಮ್ಮನ್ನು ಖಾಯಂ ಮಾಡಿ ಎಂದು ಹೇಳಿ ಕೋರ್ಟ್‌ಗೆ ಹೋಗಿದ್ದಾರೆ. ಯಾರು ನಮ್ಮ ಇಲಾಖೆಯಲ್ಲಿಯೇ ಇಲ್ಲ. ಅವರು ಒಂದು ದಿವಸ ಕೆಲಸ ಮಾಡಿಲ್ಲ. ಹೆಸರು ಮಾತ್ರ ಇದೇ ನಾರಾಯಣ್ ಪಂಡಿತ್‌ಮೂಲ ಎಂದು ಅವರು ಮನೆಯಲ್ಲಿ ಕುಳಿತುಕೊಂಡು ಆ ಲಿಸ್ಟೆಲ್ಲಾ ಮಾಡಿ ಇವರು ಇಂಥವರು ಕೆಲಸ ಮಾಡುತ್ತಾರೆ ಎಂದು ಹೇಳಿ ದುಡ್ಡು ಡ್ರಾ ಮಾಡಿದ್ದಾರೆ. ಇದನ್ನು ಬೆನ್ನತ್ತಿ ಹೋದಾಗ ಆ ತಪ್ಪುಗಳೂ ಕೂಡ ಕಂಡುಬರುತ್ತದೆ. ಅದೂ ಒಂದು ದೊಡ್ಡ ಸ್ಕ್ಯಾಂಡಲ್ ಆಗಬಹುದು. ಇದಕ್ಕೆಲ್ಲಾ ಸರ್ಕಾರ ಕಾರಣ. ಜಯಕುಮಾರ್‌ರವರು ಕಾರಣ, ಮುಖ್ಯಮಂತ್ರಿಗಳು ಕಾರಣ ಎಂದು ಸಾರಾಸಗಟಾಗಿ ಹೇಳಿಬಿಟ್ಟರೆ ಹೇಗೆ, ತಮಗೂ ಕೂಡ ಜವಾಬ್ದಾರಿ ಇದೆ. ಇದನ್ನು ತನಿಖೆ ಮಾಡುತ್ತಿದ್ದೇವೆ. ತನಿಖೆಯಾಗಿ ರಿಪೋರ್ಟ್ ಬರಲಿ. ಈಗ ಲೋಕಾಯುಕ್ತ ಏನು ತನಿಖೆ ಮಾಡಿದೆ, ಅದರ ರಿಪೋರ್ಟ್ ಬರಲಿ. ಅದರಲ್ಲಿ ನಮಗೂ ಕೂಡ ಸಮಾಧಾನವಾಗುತ್ತದೆ. ನಾಳೆ ಇದೇ ಸದನದಲ್ಲಿ ನೀವು ಇರುತ್ತೀರಿ. ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿ ನಾವು ಒಬ್ಬರನ್ನೂ ರಕ್ಷಣೆ ಮಾಡುವುದಿಲ್ಲ.

ಉಪಾಧ್ಯಕ್ಷರು: ಈಗ ಬಹಳ ಸಮಯವಾಗಿದೆ. ಅವರು ಉತ್ತರ ಹೇಳಿದ್ದಾರೆ. ಅವರು ಆಪಾದನೆ ಮಾಡಿದ್ದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸದನದಲ್ಲಿ ಇದು ಎರಡನೇ ಸಲ ಪ್ರಸ್ತಾಪವಾಗುತ್ತದೆ. ಹೋದಸಲ ಅದೇ ಜಾಗದಲ್ಲಿ ಕುಳಿತಾಗ ನಮ್ಮ ಸಭಾಪತಿಯವರು ಇದನ್ನು ಪ್ರಸ್ತಾಪಮಾಡಿದ್ದರು. ಮತ್ತೆ ಈಗ ಕೆಲವು ಹೆಚ್ಚಿನ ವಿಷಯ ಅದರಲ್ಲಿ ಸೇರಿಸಿ ಅವರೂ ಕೂಡ ಪ್ರಸ್ತಾಪಮಾಡಿದ್ದಾರೆ. ಆದರೆ ತಾವು ಈಗಾಗಲೇ ಒಪ್ಪಿಕೊಂಡಿದ್ದೀರಿ. ಇದರಲ್ಲಿ ತಪ್ಪಾಗಿದೆ. ಇದಕ್ಕೆ ಎನ್‌ಕ್ವೈರಿ ಮಾಡಿಸುತ್ತಿದ್ದೇವೆ. ಮತ್ತು ಏನೂ ಒಂದು ಅಚಾತುರ್ಯ ಘಟನೆ ಇದರಲ್ಲಿ ನಡೆದಿದೆ ಎಂದು ತಾವೇ ಇವತ್ತು ಒಪ್ಪಿಕೊಂಡಿದ್ದೀರಿ. ಈಗ ಏನು ಲೋಕಾಯುಕ್ತ ಎನ್‌ಕ್ವೈರಿ ನಡೆದಿದೆ, ಎನ್‌ಕ್ವೈರಿ ಮಾಡುವ ಆ ಲೋಕಾಯುಕ್ತ ಅಧಿಕಾರಿಗಳೇ ಅದರಲ್ಲಿ ಶಾಮಿಲಾಗಿದ್ದಾರೆಂದು. ಅದನ್ನು ಕೂಡ ನಮ್ಮ ರಾಮಸ್ವಾಮಿಯವರು ಬಯಲಿಗೆಳೆದರು. ಅವರು ಒಬ್ಬರು ಮಾರುತಿ ಕಾರ್ ತೆಗೆದುಕೊಂಡು ಹೋದರು. ಇವತ್ತು ಅದನ್ನೂ ಕೂಡ ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆನ್ನುವ ಮಾತನ್ನು ನಿಮ್ಮ ಮುಂದೆ ಸ್ಪಷ್ಟಪಡಿಸಿದ್ದಾರೆ. ಅಂದರೆ ಯಾರು ಹೊಲದ ರಕ್ಷಣೆಗೆ ಎಂದು ಬೇಲಿ ಹಾಕಿದರೆ, ಬೇಲಿಯೇ ಹೊಲವನ್ನು, ಬೆಳೆಯನ್ನು ತಿನ್ನುವುದಕ್ಕೆ ಪ್ರಾರಂಭಿಸಿದರೆ ಹೇಗೆ? ಅದಕ್ಕಾಗಿ, ಇದರಲ್ಲಿ ಲೋಕಾಯುಕ್ತ ಅಧಿಕಾರಿಗಳು, ತೋಟಾಗರಿಕಾ ಇಲಾಖೆಯ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಗಳ ಕಛೇರಿಯಿಂದ ಒಂದು ಫೋರ್ಜರಿ ಪತ್ರ ಇವೆಲ್ಲವನ್ನೂ ಕೂಡ ಎನ್‌ಕ್ವೈರಿ ಮಾಡಬೇಕೆಂದರೆ ನಿಜವಾಗಿಯೂ ಇದು ಲೋಕಾಯುಕ್ತದಿಂದ ಆಗುವುದಿಲ್ಲ, ಇದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಈಗಾಗಲೇ ಕಂಡು ಬಂದಿದೆ. ತಾವು ಮನಸ್ಸು ಬಿಚ್ಚಿ ಈಗ, ಯಾವ ಎನ್‌ಕ್ವೈರಿಗಾದರೂ ಸಿದ್ಧನಿದ್ದೇನೆ ಎಂದು ಹೇಳಿದಿರಿ, ಇದನ್ನು ಸಿಬಿಐಗೆ ಒಪ್ಪಿಸಿಬಿಡಿ, ಇದರಲ್ಲಿ ನಿಮದೇನೂ ಕೈವಾಡವಿಲ್ಲ, ನಿಮ್ಮ ಮೇಲೆ ನೇರವಾದ ಆಪಾದನೆಯನ್ನು ಅವರು ಮಾಡಿಲ್ಲ, ಸರ್ಕಾರ ಇದರಲ್ಲಿ ಶಾಮಿಲಾಗಿದೆ ಎನ್ನುವ ಮಾತನ್ನು ಏತಕ್ಕೆ ಹೇಳಿದರು ಎಂದರೆ ತೋಟಗಾರಿಕೆಯ ಇಲಾಖೆಯ ನಿರ್ದೇಶಕರೇ ಇದಕ್ಕೆ ಇನ್‌ಚಾರ್ಜ್ ಮಾಡಿ, ಹಣ ಡ್ರಾ ಮಾಡಲು ಪ್ರೋತ್ಸಾಹ ಮಾಡಿಕೊಟ್ಟು, ಖಜಾನೆಯವರೂ ಕೂಡ ಇದರಲ್ಲಿ ಶಾಮೀಲಾಗಿ, ಮತ್ತೆ ಅಕೌಂಟ್ಸ್ ಅಧಿಕಾರಿಗಳು ಕೂಡ ಇದರಲ್ಲಿ ಶಾಮಿಲಾಗಿದ್ದಾರೆ. ಹೀಗೆ ಆ ಮೊತ್ತದ ಹಣವನ್ನು ಡ್ರಾ ಮಾಡಲು ಅನೇಕ ಇಲಾಖೆಯ ಜನರು ಪಿತೂರಿ ಮಾಡಿದ್ದಾರೆ. ನೂರು, ಇನ್ನೂರು ಜನರನ್ನು ತಾತ್ಕಾಲಿಕ ನೇಮಕ ಮಾಡಿಕೊಂಡಿರುವವರು ನಾವು ಖಾಯಂ ಆಗಿಯೇ ಕೆಲಸ ಮಾಡುತ್ತಿದ್ದೇವೆಂದು ಇವತ್ತು ಕೋರ್ಟ್‌ಗೆ ಹೋರ್ಟ್‌ಗೆ ಹೋಗುತ್ತಿರುವುದರಿಂದ ಇನ್ನು 5 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆನ್ನುವುದು ತಿಳಿದಿದೆ. ಆದುದರಿಂದ ಇದನ್ನು ಸಿಬಿಐಗೆ ಒಪ್ಪಿಸಿ, ಹಿಂದೆ ಬಂಗಾರಪ್ಪನವರ ಕಾಲದಲ್ಲಿನ ಕಂಪ್ಯೂಟರ್ ಹಗರಣಕ್ಕೆ ಸಂಬಂಧಿಸಿದಂತೆ ನೇರವಾಗಿ ಸಿಬಿಐಗೆ ರೆಫರ್ ಮಾಡಿದರು. ಇದನ್ನೂ ಕೂಡ ನೇರವಾಗಿ ಸಿಬಿಐಗೆ ಒಪ್ಪಿಸಿ, ಇವತ್ತು ನೀವು ಸ್ಪಷ್ಟವಾಗಿ, ಸ್ವಚ್ಛಮನಸ್ಸಿನಿಂದ ನಮ್ಮ ಯಾರ ಕೈವಾಡವಿಲ್ಲವೆಂದು ಹೇಳಿದ್ದೀರಿ. ಅಂದಾಗ ಇದರಲ್ಲಿ ಯಾವ್ಯಾವ

ಅಧಿಕಾರಿಗಳು ಇದರಲ್ಲಿ ಶಾಮೀಲು ಆಗಿದ್ದಾರೆ, ಯಾವ್ಯಾವ ಖಜಾನಾಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವುದು ಬಹಿರಂಗವಾಗಲಿ. ಮತೆ ಇದೊಂದೇ ಪ್ರಕರಣದಲ್ಲಿ ಫೋರ್ಜರಿ ಪತ್ರ ಹೋದರೆ ಇಂತಹ ಎಷ್ಟು ಪ್ರಕರಣಗಳಲ್ಲಿ ಅವರ ಕಛೇರಿಯಿಂದ ಪತ್ರಗಳು ಹೋಗಿದ್ದಾವೆ ಎನ್ನುವುದನ್ನೂ ಕೂಡ ತನಿಖೆಮಾಡಬೇಕು. ಏಕೆಂದರೆ ಈ ಕೆಲಸ ಮಾಡುವ ಕೆಲವು ಜನರಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಕೂಡ ಮೊನ್ನೆ, ನಮ್ಮ ಕಛೇರಿಯಿಂದಲೇ ಪತ್ರಗಳು ಹೋಗಿದ್ದಾವೆ, ಕೆಲವನ್ನು ಹಿಡಿದಿದ್ದೇವೆಂದು ಹೇಳಿದರು. ದಯವಿಟ್ಟು ಇಂತಹ ಘಟನೆಗಳು ಇನ್ನು ಮುಂದೆ ಆಗಬಾರದೆನ್ನುವ ಮನಸ್ಸು ಸರ್ಕಾರಕ್ಕಿದ್ದರೆ ಈ ಬಗ್ಗೆ ಸಿಬಿಐ ಎನ್‌ಕ್ವೈರಿಯಾಗಬೇಕು. ಆದುದರಿಂದ, ತಾವು ಇದರ ಬಗ್ಗೆ ಸಿಬಿಐ ಎನ್‌ಕ್ವೈರಿ ಮಾಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ. ಜಯಕುಮಾರ್‌ರವರು, ಸಿದ್ದರಾಮಯ್ಯನವರು ಇದ್ದಾರೆ. ಸಚಿವಸಂಪುಟವೇ ಶಿಫಾರಸ್ಸು ಮಾಡಿದರೆ ಖಂಡಿತವಾಗಿಯೂ ಒಂದು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ ಎನ್‌ಕ್ವೈರಿ ಮಾಡುವವನು ಒಂದು ಮಾರುತಿ ಕಾರ್ ತೆಗೆದುಕೊಂಡ, ಬಿಲ್ ಮಾಡುವ ಮಲ್ಲಣ್ಣ ಎನ್ನುವವನ್ನು ಕೊಲೆ ಮಾಡಿರುವುದು ಉಪ್ಪಾರಪೇಟೆ ಪೋಲೀಸ್‌ಠಾಣೆಯಲ್ಲಿ ಎಫ್‌ಐಆರ್ ನೋಂದಣಿಯಾಗಿದೆ, ಚಾರ್ಜ್‌ಶೀಟ್ ಇಲ್ಲ. ಇದಕ್ಕೆ ಒಂದಕ್ಕೊಂದು ಅನೇಕ ಲಿಂಕ್ ಇದೆ; ಇದನ್ನು ನಾವು ಒಂದೇ ಕಡೆಯಿಂದ ನೋಡುವುದಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಸಚಿವರು ಉತ್ತರಕೊಟ್ಟಾಗ ನಮಗೆ ನಿಜವಾಗಿಯೂ ಸಂತೋಷವಾಯಿತು. ಏಕೆಂದರೆ ರಾಮಸ್ವಾಮಿಯವರು ಏನೇನು ಆಪಾದನೆಗಳನ್ನು ಮಾಡಿದರು ಇದರಲ್ಲಿ ಸತ್ಯಾಂಶವಿದೆ ಎನ್ನುವುದನ್ನು ತಾವು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತೀರಿ. ಮತ್ತೆ ತಾವು ಮುಂದೆ ಹೋಗಿ, ಇದುವರೆವಿಗೂ ಕೊಲೆಯಾಗಿರುವುದು ಸರ್ಕಾರದ ಗಮನಕ್ಕೆ ಬಾರದಿರುವ ಬಗ್ಗೆ ಒಂದು ಬೆಳಕು ಚೆಲ್ಲಿದ್ದಾರೆಂದು ಹೇಳುತ್ತೀರಿ. ಕೊಲೆಯಾಗಿರುವ ಬಗ್ಗೆ ಉಪ್ಪಾರಪೇಟೆ ಪೋಲಿಸ್ ಠಾಣೆಗೆ ದೂರು ಕೊಟ್ಟಾಗ ಅದನ್ನೆಲ್ಲಾ ಮುಚ್ಚಿಹಾಕಿದ್ದಾರೆ ಎನ್ನುವುದು ಬಹಳ ಗಂಭೀರವಾದುದು. ಇದರ ಜೊತೆಗೆ ಮುಖ್ಯಮಂತ್ರಿಗಳ ಕಾರ್ಯಲಯದಿಂದ ಮುಖ್ಯಮಂತ್ರಿಗಳು ಸುಳ್ಳುಸಹಿಪತ್ರ ಬಂತು ಎಂದರೆ, ಆ ಪತ್ರದ ಮೇಲೆ ಒಂದು ಆದೇಶ ಹೊರಟಿದೆ ಎಂದರೆ, ನಿಮ್ಮ ಉತ್ತರದಿಂದ ನಮಗೆ ಸಮಾಧಾನವಾಗಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ತಾವು ಚೆನ್ನಾಗಿ ಉತ್ತರ ಕೊಟ್ಟು, ಅದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದೀರಿ; ಈಗ ನೀವು ಹಿಂದೆಮುಂದೆ ನೋಡುವ ವಿಚಾರವೇನಿದೆ? ಒಂದು ಆ ಕೊಲೆ ಬಹಿರಂಗವಾಗಬೇಕು, ಆ ಕೊಲೆಯಾರಿಂದ ಆಯಿತು, ಕೊಲೆಯಾಗುವುದಕ್ಕೆ ಕಾರಣವೇನು ಎನ್ನುವುದು ಬಹಳ ಮುಖ್ಯ. ಐದು ಕೋಟಿ ರೂಪಾಯಿಗಳ ಹಣ ದುರುಪಯೋಗವಾಗಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ

ಕೊಲೆಯಾಗಿರುವುದು ಬಹಳ ಗಂಭೀರವಾದ ವಿಚಾರ. ಮತ್ತೆ ಪೋಲಿಸ್‌ಠಾಣೆಯವರು ನೇರವಾಗಿ ಶಾಮಿಲಾಗಿದ್ದಾರೆನ್ನುವ ನೇರವಾದ ಆರೋಪವಿದೆ. ಆದುದರಿಂದ ಈ ಬಗ್ಗೆ ಇಲ್ಲಿ ನೀವು ಸ್ಥಳೀಯವಾಗಿ ಒಂದು ಸಣ್ಣ ತನಿಖೆ ಮಾಡಿದರೆ, ನಿಮಗೆ ಕೀರ್ತಿಯೂ ಬರುವುದಿಲ್ಲ. ಆದುದರಿಂದ ಇದನ್ನು ನೇರವಾಗಿ ಸಿಬಿಐ ತನಿಖೆಗೆ ವಹಿಸಿದರೆ ನಿಮಗು, ಸರ್ಕಾರಕ್ಕು ಕೀರ್ತಿ ಬರುತ್ತದೆಂದು ನನಗನಿಸುತ್ತದೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ಸಚಿವರು): ಮಾನ್ಯ ಉಪಸಭಾಧ್ಯಕ್ಷರೆ, ವಿರೋಧಪಕ್ಷದ ನಾಯಕರು ಈ ಪ್ರಕರಣವನ್ನು ಯಾವ ರೀತಿ ಸರಿಯಾಗಿ ತನಿಖೆ ಮಾಡುವುದರ ಬಗ್ಗೆ ಹೇಳಿದ್ದಾರೆ. ಇದು ಬಹಳ ಸ್ವಾಗತಾರ್ಹ. ಏಕೆಂದರೆ, ಕೊಲೆಯ ವಿಚಾರ ನಮ್ಮ ಗಮನಕ್ಕೆ ಬಂದಿರಲಿಲ್ಲ, ಇದನ್ನು ರಾಮಸ್ವಾಮಿಯವರು ಹೇಳಿದ ಮೇಲೆ ತಿಳಿದಿದೆ. ಇದರ ಬಗ್ಗೆ ಹೆಚ್ಚಿನ ತನಿಖೆಯಾಗಬೇಕಾದರೆ, ಮೊದಲು ಲೋಕಾಯುಕ್ತ ವರದಿ ಬರಲಿ ಇಲ್ಲವೆಂದರೆ ನಾಳೆ ದಿವಸ ಲೋಕಾಯುಕ್ತದ ಮೇಲೆ ಜನರಿಗೆ ವಿಶ್ವಾಸವೇ ಹೊರಟುಹೋಗುತ್ತದೆ. ಲೋಕಾಯುಕ್ತ ವರದಿ ಬರುವುದಕ್ಕೆ ನಾವು ಬೇಕಾದರೆ ಸ್ಪೀಡ್ ಅಫ್ ಮಾಡಿಕಾಯೋಣ. ಅದರಲ್ಲೂ ಏನಾದರೂ ಸತ್ಯಾಂಶಕ್ಕೆ ದೂರವಾದ ವರದಿ ಬಂದರೆ ನೋಡೋಣ. ನಾವು ತೀರ್ಪು ಬರುವುದಕ್ಕೆ ಮುಂಚೆ ಎಲ್ಲವನ್ನೂ ಪೂರ್ವಕಲ್ಪನೆ ಮಾಡಿಕೊಂಡು ಲೋಕಾಯುಕ್ತದ ಮೇಲೆ ಅನುಮಾನಪಡುವುದು ಸರಿಯಲ್ಲ. ಮಾನ್ಯ ವಾಟಾಳ್‌ನಾಗರಾಜ್‌ರವರೇ, ನಾನು ಅದನ್ನೇ ಹೇಳಿರತಕ್ಕಂಥದ್ದು, ನಾನು ಮುಖ್ಯಮಂತ್ರಿಗಳ ಕಛೇರಿಯಿಂದ ಫೋರ್ಜರಿಯಾಗಿದೆ ಎಂದು ಎಲ್ಲೂ ಹೇಳಿಲ್ಲ, ಫೋರ್ಜರಿ ಆಗಿರಬಹುದೇನೊ ಎನ್ನುವ ಅನುಮಾನದ ಮಾತನ್ನು ಹೇಳಿದ್ದೇನೆ, ಅದನ್ನು ತಾವು ಗಮನಿಸಬೇಕು. ಫೋರ್ಜರಿ ಮಾಡಿರುವುದು ನನಗೆ ಗೊತ್ತಿದ್ದರೆ ನಾನು ಏತಕ್ಕೆ ಸಹಿ ಮಾಡಲಿ? ಆವಾಗ ನಾನು ಮುಖ್ಯಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋಗಿ ಈ ರೀತಿ ಅನುಮಾನ ಬರುತ್ತಿದೆ ಎಂದು ತೋರಿಸುತ್ತಿದ್ದೆ. ನನಗೆ ಅನುಮಾನ ಬಂದಿದೆ ಅಷ್ಟೆ; ಇಂಥದ್ದಕ್ಕೆಲ್ಲಾ ಮುಖ್ಯಮಂತ್ರಿಗಳು ಎನ್‌ಕ್ವೈರಿ ಮಾಡುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್: ಪ್ರತಿನಿತ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಬರುವ ಪತ್ರಗಳಲ್ಲಿ ಮುಖ್ಯಮಂತ್ರಿಗಳ ಸಹಿ ನೋಡಿದ್ದೀರಿ, ಆ ಸಹಿ ನೋಡಿದಾಗ, ಇದು ಅವರದಲ್ಲವೇನೊ ಎನ್ನುವ ಅನುಮಾನ ಬಂದಾಗ, ಅಲ್ಲಿಗೆ ಅದು ಅವರದಲ್ಲ ಎಂದರ್ಥ. ಪ್ರತಿನಿತ್ಯ ನೀವು ನೂರಾರುಪತ್ರಗಳನ್ನು ನೋಡಿರುವವರು, ಒಂದು ಪತ್ರದಲ್ಲಿ ಅನುಮಾನ ಬಂದರೆ, ಅಲ್ಲಿಗೆ ಕತೆ ಮುಗಿಯುತು, ಅಲ್ಲಿಗೆ ಅನುಮಾನ ಅಷ್ಟೆ.

ಶ್ರೀ ಡಿ.ಟಿ.ಜಯಕುಮಾರ್: ನನಗೆ ಯಾವಾಗ ಅನುಮಾನ ಬಂತು ಎಂದರೆ, ಸಹಿ ಮಾಡುವಾಗ ಅನುಮಾನ ಬರಲಿಲ್ಲ, ಈಗ ಈ ಕೇಸ್‌ನಲ್ಲಿ ಇನ್‌ವಾಲ್ವ್ ಆದ ಮೇಲೆ ಫೋರ್ಜರಿ ಸಹಿಯಾಗಿರಬಹುದೇನೋ ಎಂದು ಅನುಮಾನ ಬಂದಿರುವುದು.

ಉಪಾಧ್ಯಕ್ಷರು: ಶ್ರೀ ಡಿ.ಟಿ.ಜಯಕುಮಾರ್‌ರವರೇ, ಯಾವ ಎನ್‌ಕ್ವೈರಿ

ಮಾಡುತ್ತೀರೆನ್ನುವುದನ್ನು ಹೇಳಿಬಿಡಿ.

ಶ್ರೀ ಡಿ.ಟಿ.ಜಯಕುಮಾರ್: ಉಪಾಧ್ಯಕ್ಷರೆ, ಈಗಾಗಲೇ ಲೋಕಾಯುಕ್ತದಿಂದ ಈ ಬಗ್ಗೆ ತನಿಖೆ ನಡೆಯುತ್ತಿದೆ, ಆ ತನಿಖೆಯ ವರದಿ ಬರಲಿ, ಅದರಿಂದ ತೃಪ್ತಿಯಾಗದೇ ಹೋದರೆ ಮತ್ತೆ ಯಾವುದಾದರೂ ರೂಪದಲ್ಲಿ ಈ ಪ್ರಶ್ನೆ ಬರಲಿ, ಯಾವುದಕ್ಕೆ ರೆಫರ್ ಮಾಡಬೇಕೋ ಅದಕ್ಕೆ ರೆಫರ್ ಮಾಡುತ್ತೇವೆಂದು ಸದನಕ್ಕೆ ತಮ್ಮ ಮುಖಾಂತರ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಹೋಂವರ್ಕ್ ಮಾಡಿ, ಅದನ್ನು ಚೆನ್ನಾಗಿ ಸದನದಲ್ಲಿ ಪ್ರೆಸೆಂಟ್ ಮಾಡಿ, ಪರ್ಸನಲ್ ಆಗಿ ಆಸ್ಪರ್ಷನ್ಸ್ ಅನ್ನು ಕ್ಯಾಸ್ ಮಾಡಿಲ್ಲ, ಇದನ್ನು ಅದನ್ನು ಸನ್ಮಾನ್ಯ ಸಚಿವರೂ ಕೂಡ ಒಪ್ಪಿಕೊಳ್ಳುತ್ತಿದ್ದಾರೆ. ಮತ್ತೆ ಲೋಕಾಯುಕ್ತದಲ್ಲಿ ಯಾವ ರೀತಿಯಾಗಿ ವಿಶ್ವಾಸ ಖೋತವಾಗಿದೆ ಎನ್ನುವುದನ್ನು, ಎನ್‌ಕ್ವೈರಿ ಮಾಡುವುದಕ್ಕೆ ಹೋದವರು ಏನೇನು ಮಾಡಿದ್ದಾರೆನ್ನುವುದನ್ನು ಹೇಳಿದ್ದಾರೆ. To prove your sincerity, ಅವಾಗಲೇ ಹೇಳಿದರು 'He is honest. That is why he is sincere' and ಕೋಪ ಬರುತ್ತದೆಂದು ಹೇಳಿದರು. To prove your honesty, to prove your sincerity, to prove your sensitiveness, please send this for CBI enquiry. ನೀವು ಪ್ರಿಸ್ಟೀಜ್ ಮೇಲೆ ಕುಳಿತುಕೊಳ್ಳಲೇ ಬೇಡಿ, ಇದು ರಾಜ್ಯದ ಹಣದ ಪ್ರಶ್ನೆ; ರಾಜ್ಯದ ಖಜಾನೆಯ ಪ್ರಶ್ನೆ, ರಾಜ್ಯದಲ್ಲಿ ವಿಶ್ವಾಸಾರ್ಹತೆಯನ್ನುಂಟು ಮಾಡುವ ಪ್ರಶ್ನೆಯಾದ್ದರಿಂದ ಇದನ್ನು ಸಿಬಿಐ ತನಿಖೆಗೆ ವಹಿಸಿಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಸನ್ಮಾನ್ಯ ಉಪಮುಖ್ಯಮಂತ್ರಿಯವರೆ, ಸನ್ಮಾನ್ಯ ರಾಮಸ್ವಾಮಿಯವರು ಮಾತನಾಡಿದ್ದನ್ನು ಬಹಳ ಸ್ಪಷ್ಟವಾಗಿ ನೀವು ಕೇಳಿದ್ದೀರಿ, ಮಂತ್ರಿಗಳು ಕೇಳಿದ್ದಾರೆ, ತುಂಬ ಒಪ್ಪಿಗೆಯೆ ಆಗಿಹೋಗಿದೆ, ಅವರು ಇಲ್ಲವೆಂದಿದ್ದರೆ ಮತ್ತೆ ಚರ್ಚೆಗಳಾಗುತ್ತಿದ್ದವು. ಸರ್ಕಾರವು ಒಪ್ಪಿಕೊಂಡಿದೆ, ವಿರೋಧಪಕ್ಷದವರು ಒಪ್ಪಿಕೊಂಡಿದ್ದಾರೆ, ಅಂತಹ ಖದೀಮರಿಗೆ ಶಿಕ್ಷೆಯಾಗಬೇಕಾದರೆ ಸಿಬಿಐ ತನಿಖೆ ಆಗಲೇ ಬೇಕು, ಇದಕ್ಕೆ ಏತಕ್ಕೆ ಹಿಂದೆ ಮಂದೆ ನೋಡುತ್ತಿದ್ದೀರಿ, ಇದಕ್ಕೆ ಪ್ರತಿಷ್ಠೆ ಏತಕ್ಕೆ?

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಉಪಸಭಾಧ್ಯಕ್ಷರೆ, ಇಲ್ಲಿ ಸಿಬಿಐ ತನಿಖೆಯ ಪ್ರಶ್ನೆಯಲ್ಲ, ಏಕಾಏಕಿಯಾಗಿ ಸಿಬಿಐ ತನಿಖೆ ಮಾಡುವುದಕ್ಕೆ ಬರುವುದಿಲ್ಲ. ಲೋಕಾಯುಕ್ತ ಎನ್‌ಕ್ವೈರಿಯಾಗಿದೆ ವರದಿ ಬರಲಿ, ಆ ವರದಿಯ ಮೇಲೆ ಏನಾದರೂ ಅನುಮಾನ ಬಂದರೆ ಮಾಡೋಣ. ಈ ಲೋಕಾಯುಕ್ತ ಎನ್‌ಕ್ವೈರಿ ಮಾಡುತ್ತಿರುವುದನ್ನು ನಿಲ್ಲಿಸಿ, ಸಿಬಿಐ ಎನ್‌ಕ್ವೈರಿ ಮಾಡಿಸುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಲೋಕಾಯುಕ್ತದಲ್ಲಿ ಏನೇನು ನಡೆಯುತ್ತಿದೆ ಎಂದು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ, ಸಿಬಿಐ ತನಿಖೆಯನ್ನು ಮಾಡಿಲಲ್ಲವೆಂದರೆ ಸುಮ್ಮನೆ ನಿಮ್ಮ ಮೇಲೆ ಗೂಬೆಯನ್ನು ಕೂರಿಸುತ್ತಾರೆ. ನೀವು ತಯಾರಿದ್ದೀರಿ, ನೀವು ಅವನಿಗೆ ರಕ್ಷಣೆ ಮಾಡುತ್ತೀರಿ, ನಾವು ಒಪ್ಪುತ್ತೇವೆ. ದಯವಿಟ್ಟು ಇದರ ಬಗ್ಗೆ ಉಪಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಲೋಕಾಯುಕ್ತದವರು ತಮ್ಮ ಕೇಸ್ ಫೈಲನ್ನೇ ತನಿಖಾ ಹಂತದಲ್ಲೇ ವಾಪಸ್ ಪಡೆದುಬಿಡುತ್ತಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಲೋಕಾಯುಕ್ತವನ್ನು ಕೂಡ ತನಿಖೆ ಮಾಡಲು ಈ ಸದನ ಸೃಷ್ಟಿ ಮಾಡಿರತಕ್ಕಂಥ ಒಂದು ಸಂಸ್ಥೆ, ಈಗ ಅವರು ತನಿಖೆ ಮಾಡುತ್ತಿದ್ದಾರೆ. ಇವರೆಲ್ಲಾ ಹೇಳಿದ ಆರೋಪಗಳು, ರಾಮಸ್ವಾಮಿಯವರು ಹೇಳಿದಂಥ ಕೆಲವು ಆರೋಪಗಳು ಸರಿಯಿದೆ ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈಗ ತನಿಖೆ ಅರ್ಧದಲ್ಲಿ ನಡೆಯುತ್ತಿದೆ, ಲೋಕಾಯುಕ್ತದವರು ತನಿಖೆ ಸರಿಯಾಗಿ ಮಾಡುವುದಿಲ್ಲ, ಅವರು ಶಾಮಿಲಾಗಿದ್ದಾರೆ ಎಂದು ರಾಮಸ್ವಾಮಿಯವರು ಹೇಳಿದ್ದಾರೆ. ಅದಕ್ಕೆ ಯಾವ ಪುರಾವೆಗಳಿದ್ದಾವೋ ನನಗೆ ಗೊತ್ತಿಲ್ಲ. ಆದರೆ ಲೋಕಾಯುಕ್ತದವರು ತನಿಖೆಯ ಅರ್ಧದಾರಿಯಲ್ಲಿರುವುದರಿಂದ ಆ ವರದಿ ಬರಲಿ. ಈಗ ನಾವೇ, ಈ ಮನೆಯೇ ಸೃಷ್ಟಿ ಮಾಡಿರುವ ಒಂದು ತನಿಖಾ ಸಂಸ್ಥೆಯ ಮೇಲೆ ಅವರು ಮಾಡುವುದು ಸರಿಯಲ್ಲ, ಅವರು ನ್ಯಾಯಯುತವಾಗಿ ಕೊಡುವುದಿಲ್ಲವೆಂದು ನಾವು ಆ ಸಂಸ್ಥೆಯ ಬಗ್ಗೆ ಸಂಶಯವ್ಯಕ್ತಪಡಿಸಿದರೆ, ನಾವು ಲೋಕಾಯುಕ್ತವನ್ನು ತೆಗೆದುಹಾಕಬೇಕಾಗುತ್ತದೆ. ಆದುದರಿಂದ ಲೋಕಾಯುಕ್ತ ಈ ತನಿಖೆ ಮಾಡುತ್ತಿರುವುದರಿಂದ, ಯಾವುದನ್ನಾದರೂ ಮುಚ್ಚಿಹಾಕಬೇಕೆನ್ನುವ ಉದ್ದೇಶವಿದ್ದರೆ, ಮಂತ್ರಿಗಳು ಇದನೆಲ್ಲಾ ಹೇಳುವ ಅಗತ್ಯವಿರಲಿಲ್ಲ. ದಾಖಿತಿಗಳನ್ನೆಲ್ಲಾ ಓವರ್‌ಲುಕ್ ಮಾಡಿ ಅವರು ವರದಿಕೊಡಲು ಸಾಧ್ಯವೇ ಇಲ್ಲ. ಅವರ ವರದಿಯಲ್ಲಿ ಸತ್ಯಾಂಶ ಬಂದೇ ಬರುತ್ತದೆ. ಯಾವುದೇ ಅಧಿಕಾರಿಯನ್ನು ರಕ್ಷಣೆ ಮಾಡತಕ್ಕ ಉದ್ದೇಶ ಸರ್ಕಾರಕ್ಕಿಲ್ಲ. ಆ ರೀತಿ ಇದ್ದಿದ್ದರೆ ಈ ರೀತಿಯಾದ ಉತ್ತರವನ್ನು ಕೊಡುತ್ತಲೇ ಇರುತ್ತಿರಲಿಲ್ಲ. ಆದ್ದರಿಂದ ಲೋಕಾಯುಕ್ತದಿಂದ ವರದಿ ಬಂದಮೇಲೆ ಇದರ ಬಗ್ಗೆ ಪರಿಶೀಲನೆ ಮಾಡೋಣ. ಒಂದು ವೇಳೆ ಅದೂ ಸಹ ಸರಿಯಾಗಿಲ್ಲವೆಂದು ತಿಳಿದುಬಂದರೆ ಅನಂತರ ಏನು ಮಾಡಬೇಕು ಎಂಬ ಬಗ್ಗೆ ನೋಡೋಣ. ತನಿಖೆ ಮಧ್ಯಾಂತರದಲ್ಲಿರುವುದರಿಂದ ನಾವು ಲೋಕಾಯುಕ್ತವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿಂದ ವರದಿ ಬಂದಮೇಲೆ ತೀರ್ಮಾನ ಮಾಡೋಣ.

ಶ್ರೀ ಎ.ಟಿ.ರಾಮಸ್ವಾಮಿ: ಇದು ಬಹಳ ಗಂಭೀರವಾದ ವಿಚಾರವೆಂದು ನಾನು ಮೊದಲೇ ಹೇಳಿದೆ. ಒಬ್ಬ ತೋಟಗಾರಿಕಾ ಇಲಾಖಾ ಸಹಾಯಕ ಇಷ್ಟೊಂದು

ಮಾಡಲು ಸಾಧ್ಯವಾಗುವುದಿಲ್ಲ. ಇದರ ಹಿನ್ನಲೆ ಬೇರೆ ಇದೆಯೆಂದು ಅವರೂ ಒಪ್ಪಿಕೊಂಡಿದ್ದಾರೆ. ಮಂತ್ರಿಗಳೂ ಅವರ ಮಾತಿನಲ್ಲಿ ಅದನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಹೊಸ ಹೊಸ ವಿಚಾರವನ್ನು ಹೇಳಿದ್ದಾರೆ. ಆ ಮನುಷ್ಯನ ಹೆಸರು ಹೇಳಿದರು, ತಾರೀಖನ್ನು ಹೇಳಿದರು, ಬಿಲ್ಲನ್ನು ಯಾವ ರೀತಿಯಾಗಿ ತಯಾರು ಮಾಡಿದ್ದಾರೆಂದು ಎಲ್ಲವನ್ನೂ ಹೇಳಿದ್ದಾರೆ.

ಉಪಾಧ್ಯಕ್ಷರು: ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ರಾಮಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಆ ದಾಖಲೆಗಳನ್ನು ಮಂತ್ರಿಯವರಿಗೆ ಕಳುಹಿಸಿಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಹಾಗಾದರೆ ನಾವು ಅದರ ಬಗ್ಗೆ ಇಲ್ಲಿ ತಮ್ಮ ಗಮನಕ್ಕೆ ತಂದಿದ್ದರ ತಪ್ಪಿಗಾಗಿ ತಮಗೆ ಅದರ ಬಗ್ಗೆ ಎವಿಡೆನ್ಸ್ ಕೊಡಬೇಕಾ? ತಾವು ಲೋಕಾಯುಕ್ತಕ್ಕೆ ವಿಚಾರಣೆಗೆ ಒಪ್ಪಿಸಿದ್ದೇ ಒಂದು ವಿಚಾರದ ಬಗ್ಗೆ, ಅದರ ಜೊತೆಗೆ ಮತ್ತೆ ಕೆಲವು ವಿಚಾರಗಳಿದೆ, ಇವೆಲ್ಲವನ್ನು ಸೇರಿಸಿ ತಾವು ಸಿ.ಬಿ.ಐ.ಗೆ ವಿಚಾರಣೆಗೆ ವಹಿಸಿದರೆ ಅವರು ಸಂಪೂರ್ಣವಾಗಿ ತನಿಖೆ ಮಾಡುತ್ತಾರೆ. ಇದರಲ್ಲಿ ತೋಟಗಾರಿಕಾ ಸಚಿವರ, ಮುಖ್ಯಮಂತ್ರಿಯವರ, ಆರ್ಥಿಕ ಸಚಿವರ ಕೈವಾಡವಿದೆಯೆಂದು ನಾವೇನು ನೇರವಾಗಿ ಹೇಳಿದ್ದೇವೆಯೇ? ಯಾವ ರೀತಿಯಾಗಿ ಅಧಿಕಾರಿಗಳು, ಖಜಾನೆಯ ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ, ಇಲ್ಲಿ ಯಾವರೀತಿಯಾಗಿ ಕನ್ಸರೆಸಿ ನಡೆದಿದೆ, ಜೆ.ಹೆಚ್.ಪಟೇಲ್‌ರವರಿಂದ ಪತ್ರ ಹೇಗೆ ಹೋಯಿತು, ಯಾರಾದರೂ ಆ ರೀತಿ ಪತ್ರ ಕಳುಹಿಸಿ ಹೇಳಿದ್ದರೆ, ಇವೆಲ್ಲದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ನಮಗೂ ನಾಲ್ಕಾರು ಶಿಫಾರಸ್ಸಿನ ಪತ್ರಗಳು ಬರುತ್ತದೆ, ಒಂದನ್ನು ನಾವು ಇಟ್ಟುಕೊಂಡು ಮತ್ತೊಂದನ್ನು ತಮಗೆ ಕಳುಹಿಸುತ್ತೇವೆ. ಅದು ಬೇರೆ ವಿಚಾರ. ಆದರೆ ಇಲ್ಲಿ 5-6 ಕೋಟಿ ಹಣವನ್ನು ಡ್ರಾ ಮಾಡಿಕೊಳ್ಳುವುದಲ್ಲದೆ ಇನ್ನೂ 5-6 ಕೋಟಿ ನಿಮಗೆ ಧಕ್ಕೆ ಬರುತ್ತಿದೆ. ಅದಲ್ಲದೆ ಮಲ್ಲಣ್ಣ ಎಂಬುವವರ ಕೊಲೆಯಾಯಿತು. ಅದು ಹೊಸದಾಗಿ ಬೆಳಕಿಗೆ ಬಂದಿದೆ. ಇವೆಲ್ಲದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಬೇಕೆಂದಾಗ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಇಟ್ಟು ಸಿ.ಬಿ.ಐ.ಗೆ ಕಳುಹಿಸಿಕೊಡುತ್ತೇವೆಂದರೆ ತೊಂದರೆಯೇನು? ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ನಾವು ಹೇಳುತ್ತಿಲ್ಲ, ಇಲ್ಲಿ ಇಂಪಾರ್ಷಿಯಲ್ ವಿಚಾರಣೆಯಾಗಬೇಕೆಂದು ಹೇಳುತ್ತಿದ್ದೇವೆ. ಲೋಕಾಯುಕ್ತದಲ್ಲಿ ಹೈಕೋರ್ಟ್, ಸುಪ್ರೀಮ್‌ಕೋರ್ಟಿನ ಮುಖ್ಯ ನ್ಯಾಯಾಧೀಶರುಗಳು ಇರುತ್ತಾರೆ. ಅವರು ಕೊಡುವ ತೀರ್ಮಾನ ಸರಿಯಿಲ್ಲವೆಂದು ಸಾರಾಸಗಟಾಗಿ ನಾನು ಹೇಳುತ್ತಿಲ್ಲ. ಆದರೆ

ಕೆಳಹಂತದಲ್ಲಿರುವ ಪೋಲೀಸ್ ಅಧಿಕಾರಿಗಳು ಅನೇಕಸಾರಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಈ ಕೇಸನ್ನು ಮುಚ್ಚಿಸತಕ್ಕ ಕೆಲಸವಾಗುತ್ತದೆ. ಸರಣಿ ಅಫೆನ್ಸ್‌ಗಳೇನಿದೆ, ಅವನು ಅಮಾನತ್ತುಗೊಂಡ, ಅನಂತರ ರೀಇನ್‌ಸ್ಟೇಟ್ ಆದ, ಮತ್ತೆ ಅದೇ ಜಾಗಕ್ಕೆ ಹೋದ, ಅವನಿಗೆ ಅಧಿಕಾರವಿಲ್ಲದಿದ್ದರೂ ಮತ್ತೆ ಅಧಿಕಾರವನ್ನು ಕೊಟ್ಟುಬಿಟ್ಟರು, ಇವೆಲ್ಲವುಗಳು ಇರುವುದರಿಂದ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಸಿ.ಬಿ.ಐ. ವಿಚಾರಣೆಗೆ ಶಿಫಾರಸ್ಸು ಮಾಡುತ್ತೇವೆಂದು ಹೇಳಿಬಿಡಿ. ನಿಮ್ಮ ಟರ್ಮ್ಸ್ ಆಫ್ ರೆಫರೆನ್ಸ್ ಏನಿದೆ ಅದನ್ನು ಮಾಡಿ. ಇದನ್ನೇ ಮಾಡಬೇಕು, ಇಂಥವರನ್ನೇ ಸಿಕ್ಕಿಹಾಕಿಸಬೇಂದೇನಿಲ್ಲ, ಈ ಹಗರಣದಲ್ಲಿ ಯಾರ್‍ಯಾರು ಶಾಮೀಲಾಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ಹಗರಣದ ಬಗ್ಗೆ ಬಯಲಿಗೆ ತಂದರೆ ಬೇರೆ ಇಲಾಖೆಗಳಲ್ಲಿ ಆ ರೀತಿ ಮಾಡುವುದು ನಿಂತುಹೋಗುತ್ತದೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ಸಚಿವರು): ಇಂಥ ಹಗರಣಗಳು ಬೇರೆ ಎಲ್ಲಾ ಇಲಾಖೆಗಳಲ್ಲೂ ಆಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳಲು ತಯಾರಾಗಿಲ್ಲ. ಏನೋ ಒಂದು ರೇರ್ ಕೇಸ್. ಈ ರೀತಿ ಆಗಲು ಸಾಧ್ಯವಾಗುತ್ತದೆಯೇ ಹೊರತು ಹೆಚ್ಚು ಆಗಲು ಸಾಧ್ಯವೇ ಇಲ್ಲ. ಹತ್ತು ರೂಪಾಯಿ ಹೆಚ್ಚಾಗಿ ಬ್ಯಾಂಕ್‌ನಿಂದಾಗಲಿ, ಆರ್ಥಿಕ ಇಲಾಖೆಯಿಂದಾಗಲಿ ಡ್ರಾ ಮಾಡುವುದು ಬಹಳ ಕಷ್ಟವಿದೆ. ಬ್ಯಾಂಕ್‌ಗಳಲ್ಲಿ ಒಂದು ಸಣ್ಣ ತಪ್ಪು ಇದ್ದರೆ ಮತ್ತೆ ಸಹಿ ಮಾಡಿ ಎಂದು ಕೇಳುತ್ತಾರೆ. ಹೀಗಿರುವಾಗ ಇಲ್ಲಿ ಹೇಗೆ ಆಯಿತೋ ಎಂಬುದು ಅದ್ಭುತ. ಮಾನ್ಯ ರಾಮಸ್ವಾಮಿಯವರಿಗೆ ಖಂಡಿತವಾಗಿ ಕಾಳಜಿ ಇದ್ದರೆ ತಮ್ಮಲ್ಲಿರುವ ದಾಖಲೆಗಳನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿ, ಎವಿಡೆನ್ಸ್ ಕೊಡಿ, ಅದರಿಂದ ವಿಚಾರಣೆಗೆ ಸಹಾಯಕವಾಗುತ್ತದೆ. ತಾವು ಆ ನಿಟ್ಟಿನಲ್ಲಿ ಸಹಕಾರ ಮಾಡಬಹುದು. ಲೋಕಾಯುಕ್ತವನ್ನು ನಂಬಬಾರದು, ಎಲ್ಲವನ್ನೂ ಸಿ.ಬಿ.ಐಗೆ ರೆಫರ್ ಮಾಡಬೇಕು ಎಂಬುದು ಕೆಟ್ಟಸಂಪ್ರದಾಯವಾಗುತ್ತದೆ. This should not be a bad precedent in the interest of the future.

ಶ್ರೀಮತಿ ಪ್ರಮೀಳನೇಸರ್ಗಿ: ಮಲ್ಲಣ್ಣನವರ ಕೊಲೆ ಲೋಕಾಯುಕ್ತಕ್ಕೆ ರೆಫರ್ ಮಾಡುವುದಕ್ಕೆ ಆಗುವುದಿಲ್ಲ. ಇದು ಹೊಸದಾಗಿ ಬೆಳಕಿಗೆ ಬಂದಿರುವುದೆಂದು ತಾವೇ ಹೇಳಿದ್ದೀರಿ. ತಾವು ಲೋಕಾಯುಕ್ತಕ್ಕೆ ಮೊದಲು ವಿಚಾರಣೆ ಮಾಡಲು ಹೇಳಿದಾಗ ಮಲ್ಲಣ್ಣನ ಕೊಲೆ ಬಗ್ಗೆ ಸೇರಿಸಿಲ್ಲ. ಲೋಕಾಯುಕ್ತದ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ.

ಶ್ರೀ ಡಿ.ಟಿ.ಜಯಕುಮಾರ್: ಅದಕ್ಕೆ ಸಂಬಂಧಪಟ್ಟಿದ್ದು ಎಂದು ಕೇಳಬಹುದಲ್ಲವೇ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಹೊಸದಾಗಿ ವಿಚಾರ ಪ್ರಸ್ತಾಪವಾಗಿ, ಯಾವುದೇ ತನಿಖಾ ಸಂಸ್ಥೆಗೆ ವಿಚಾರಣೆಗೆ

ಕೊಡದಿದ್ದರೆ ಅದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸಲು ನಮ್ಮದೇನೂ ಅಭ್ಯಂತರವಿಲ್ಲ. ಯಾರೇ ಅಧಿಕಾರಿ ಎಷ್ಟೇ ದೊಡ್ಡವನಾಗಿದ್ದರೂ ಅವರಿಗೆ ಶಿಕ್ಷೆಯಾಗಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ತಪ್ಪತಸ್ಥರಿಗೆ ಶಿಕ್ಷೆಯಾಗಲೇಬೇಕು. ಅದು ಸರ್ಕಾರದ, ಸಾರ್ವಜನಿಕರ, ಬೇರೆ ರೀತಿಯಲ್ಲಿ ಹಣವನ್ನು ಲೂಟಿ ಮಾಡುವುದಿರಬಹುದು ಬೇರೆ ರೀತಿಯಲ್ಲಿ ಸರ್ಕಾರಕ್ಕೆ ಮೋಸ ಮಾಡತಕ್ಕದ್ದು ಇರಬಹುದು, ಈಗಾಗಲೇ ಅದರ ಬಗ್ಗೆ ಲೋಕಾಯುಕ್ತಕ್ಕೆ ಕೊಡಲಾಗಿದ್ದು ತನಿಖೆ ನಡೆಯುತ್ತಿದೆ. ಈಗೇನು ಮಲ್ಲಣ್ಣ ಎನ್ನತಕ್ಕವರ ಕೊಲೆಯಾಗಿದೆ ಎಂದು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಲೋಕಾಯುಕ್ತಕ್ಕೆ ವಿಚಾರಣೆಗೆ ವಹಿಸೋಣ.

ಶ್ರೀಮತಿ ಪ್ರಮೀಳನೇಸರ್ಗಿ: ಲೋಕಾಯುಕ್ತದವರು ಅದರ ಬಗ್ಗೆ ವಿಚಾರಣೆ ಮಾಡಲು ಸಾಧ್ಯವಿಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಮಲ್ಲಣ್ಣನವರ ಕೊಲೆಯಾಗಿರುವ ಬಗ್ಗೆ ಹೇಳಿದ್ದಾರೆ. ಸರ್ಕಾರಕ್ಕೆ ಯಾವುದನ್ನು ಮುಚ್ಚಿಡುವ ಉದ್ದೇಶವಿಲ್ಲ. ಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಇಷ್ಟಾದವರೂ ಸಹ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಏ.ಟಿ.ರಾಮಸ್ವಾಮಿ: ಇಲ್ಲಿ ಮುಖ್ಯಮಂತ್ರಿಗಳ ಕಛೇರಿಯೂ ಶಾಮೀಲಾಗಿದೆ. ಲೋಕಾಯುಕ್ತದಲ್ಲಿ ವಿಚಾರಣೆಗೆ ಒಬ್ಬರು ಡಿವೈಎಸ್‌ಪಿಯನ್ನು ನೇಮಕ ಮಾಡಿದ್ದಾರೆ. ಅವರು ಮುಖ್ಯಮಂತ್ರಿಯವರ ಕಛೇರಿಯನ್ನು ತನಿಖೆ ಮಾಡಲು ಸಾಧ್ಯವಾಗುತ್ತದೆಯೇ? ಖಜಾನೆ, ಬ್ಯಾಂಕ್, ಇತರೆ ಅಧಿಕಾರಿಗಳು ಶಾಮೀಲಾಗಿದ್ದಾರೆ, ಕೊಲೆಯಾಗಿದೆ, ಆದ್ದರಿಂದ ತಾವು ದಯಮಾಡಿ ಇದನ್ನು ಸಿಬಿಐ ತನಿಖೆಗೆ ರೆಫರ್ ಮಾಡಬೇಕು. ಆ ರೀತಿ ಮಾಡಿದರೆ ತಮ್ಮ ಸ್ವಪ್ರತಿಷ್ಠೆ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಇಲ್ಲಿ ಪ್ರತಿಷ್ಠೆಯ ಪ್ರಶ್ನೆ ಬರುವುದಿಲ್ಲ. ಎಲ್ಲಾ ವಿಚಾರದ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ತೆಗೆದುಕೊಂಡು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಸಿ.ಬಿ.ಐಗೆ ರೆಫರ್ ಮಾಡುತ್ತೇವೆಂದರೆ ತೊಂದರೆಯಿಲ್ಲ. ಇಲ್ಲಿ ಖಜಾನೆ ಕಛೇರಿ ಮಾತ್ರವಲ್ಲ, ಬ್ಯಾಂಕ್‌ರವರೂ ಹೇಗೆ ಚೆಕ್‌ನ್ನು ಕೊಟ್ಟರು ಎಂಬ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಅಂದಾಗ ಇವೆಲ್ಲಾ ಲೋಕಾಯುಕ್ತದ ಪರ್‌ವ್ಯೂನಲ್ಲಿ ಬರುವುದಿಲ್ಲ. ಒಂದು ಕಡೆ ಮರ್ಡರ್; ಒಂದು ಕಡೆ ಬ್ಯಾಂಕಿನ ಚೆಕ್ಕು, ಇವೆಲ್ಲವೂ ಕೂಡ ಇದೆ.

ಶ್ರೀ ಸಿದ್ದರಾಮಯ್ಯ: ಇದು ಲೋಕಾಯುಕ್ತದ ವ್ಯಾಪ್ತಿಗೆ ಬರುತ್ತದೆಯೇ ಬಾರದಿದ್ದರೆ ಸಿ.ಬಿ.ಐ ಮೂಲಕ ವಿಚಾರಣೆ ಮಾಡಿಸಬೇಕೆ ಎಂಬ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ವಿಷಯ: ಟೈಮ್ಸ್ ಆಫ್ ಇಂಡಿಯಾದ ಪ್ರಸರಣಾಧಿಕಾರಿಯ ಕೊಲೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರಸರಣಾಧಿಕಾರಿಯಾದ ರಂಗನಾಥನ್‌ರವರ ಕೊಲೆ ನಿನ್ನೆ ರಾತ್ರಿಯಾಗಿದೆ. ಅವರ ಮನೆಗೆ ನುಗ್ಗಿ ಲೂಟಿ ಮಾಡಿ, ಅವರನ್ನು ಹಗ್ಗದಿಂದ ಕಟ್ಟಿ ಕೊಲೆ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ದಯಮಾಡಿ ತಿಳಿಸಬೇಕು.

ಶ್ರೀ ಸಿದ್ದರಾಮಯ್ಯ: ಮಾಹಿತಿಯನ್ನು ತರಿಸಿಕೊಂಡು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಮಾನ್ಯ ಸದಸ್ಯರು ಇದರ ಬಗ್ಗೆ ಈಗ ತಾನೆ ಹೇಳಿದ್ದಾರೆ. ಮಾನ್ಯ ಪೋಲೀಸ್ ಕಮೀಷನರ್‌ರವರು ಈಗಾಗಲೇ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಗೃಹ ಸಚಿವರು ಬಂದಮೇಲೆ ಹೇಳಿಕೆಯನ್ನು ಕೊಡಿಸುತ್ತೇನೆ.

4.40 ಪಿಎಂ

ಶ್ರೀ ವಾಟಾಳ್ ನಾಗರಾಜ್: ಇಡೀ ಹಿರಿಯ ಪೋಲಿಸ್ ಅಧಿಕಾರಿಗಳು ಹೋಗಿದ್ದಾರೆ. ಈ ಪರಿಸ್ಥಿತಿ ಹಿಂದೆ ಒಂದು ಸಾರಿ ಏಷಿಯನ್ ಏಜ್ ಪತ್ರಿಕೆ ಕಾರ್ಯಾಲಯಕ್ಕೆ ಆಗಿತ್ತು. ಕಾರ್ಯಾಲಯಕ್ಕೆ ನುಗ್ಗಿದ್ದು ತಮಗೆ ಗೊತ್ತಿದೆ. ಅಲ್ಲಿ ದೊಡ್ಡ ಗಲಾಟೆಯಾಯಿತು. ಅದು ಎಷ್ಟೋ ದಿವಸವಾಯಿತು, ಇನ್ನು ಆ ತನಿಖೆ ಏನಾಯಿತು, ಆ ವರದಿ ಏನಾಯಿತು ಏನೂ ಬಂದಿಲ್ಲ. ಪರಿಸ್ಥಿತಿ ಹೀಗೇ ಆದರೆ ಇದರ ಬಗ್ಗೆ ಸರ್ಕಾರ ಕೂಲಂಕಷವಾಗಿ ಸಮಗ್ರವಾದ ತನಿಖೆ ಮಾಡಿ ಈ ಸದನದ ಮುಂದೆ ಆ ಸಮಗ್ರವಾದ ವಿಚಾರ ಮುಂದಿಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಈ ತರಹ ಆದರೆ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಷ್ಟರ ಮಟ್ಟಿಗೆ ಕೊಲೆಗಳು ಹಗಲು ರಾತ್ರಿ ಪ್ರಾರಂಭ ಮಾಡಿದರೆ ಸರ್ಕಾರ ಸರ್ಕಾರ ಇದರ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದರಲ್ಲಿ ಮೋಸ್ಟ್ ಆಫ್ ದಿ ಗೂಂಡಾ ಎಲಿಮೆಂಟ್ಸ್ ಯಾವುದಾದರೂ ಹಗರಣಗಳನ್ನು ಹೊರಗೆ ತೆಗೆದಾಗ, ಪಬ್ಲಿಷ್ ಆದಾಗ ಪ್ರಾಪರ್ಟಿ ಜಗಳವಾದಾಗ ಅಂತಹ ಜನ ಇದರಲ್ಲಿ ಬಹಳಷ್ಟು ಇದರಲ್ಲಿ ಇನ್‌ವಾಲ್ವ